ಸಂಪುಟ 01 | ಸಂಚಿಕೆ 134 | ಗುರುವಾರ 02 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಹನುಮಾನ್ ಜಯಂತಿ**

ಹನುಮಾನ್ ಜಯಂತಿಯನ್ನು ಏಪ್ರಿಲ್ 2, 2026 (ಗುರುವಾರ) ಚೈತ್ರ ಪೂರ್ಣಿಮೆಯ ದಿನದಂದು ಆಚರಿಸಲಾಗುತ್ತದೆ. ಈ ದಿನದಂದು ಭಕ್ತರು ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ, ಹನುಮಾನ್ ಚಾಲೀಸಾ ಪಠಣ ಮತ್ತು ಉಪವಾಸ ಆಚರಿಸುತ್ತಾರೆ. ನಕಾರಾತ್ಮಕ ಶಕ್ತಿಗಳನ್ನು ದೂರವಿಡಲು ಪಂಚಮುಖಿ ಹನುಮಂತನ ವಿಗ್ರಹ ಅಥವಾ ಸಿಂಧೂರವನ್ನು ಮನೆಗೆ ತರುವುದು ಶ್ರೇಷ್ಠವೆಂದು ಪರಿಗಣಿಸಲಾಗಿದೆ.

**2) ಅಕ್ಕಮಹಾದೇವಿ ಜಯಂತಿ**

ಅಕ್ಕಮಹಾದೇವಿ ವಚನ ಸಾಹಿತ್ಯದ ಪ್ರಮುಖರಲ್ಲೊಬ್ಬರು. ಅಕ್ಕಮಹಾದೇವಿ ಕನ್ನಡದ ಪ್ರಥಮ ಮಹಿಳಾ ಕವಿಯತ್ರಿಯಾಗಿದ್ದಾರೆ. ಅಕ್ಕಮಹಾದೇವಿಯವರನ್ನು ಶರಣ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀವಾದಿ ಚಳವಳಿಯ ನಿಜವಾದ ಪ್ರತಿಪಾದಕಿಯಾಗಿ, ಅಕ್ಕರೆಯ ಅಕ್ಕನಾಗಿ, ಹೀಗೆ ಹಲವು ರೀತಿ ಗುರುತಿಸ ಬಹುದಾಗಿದೆ. ಚಿಕ್ಕ ವಯಸ್ಸಿನಲ್ಲೆ ಸಕಲ ಸುಖವನ್ನು ತ್ಯಜಿಸಿದ ಅಕ್ಕ, ಎದುರಿಸಿದ ಪರೀಕ್ಷೆಗಳು ಬಹಳಷ್ಟು. ಸಾಕ್ಷಾತ್ ಶಿವ ( ಮಲ್ಲಿಕಾರ್ಜುನ)ನನ್ನು ಪತಿ ಎಂದು ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ ನಡೆದ ಅಕ್ಕ, ಹಲವಾರು ಭಕ್ತರಿಗೆ ಮಾದರಿಯಾಗಿದ್ದಾಳೆ.

**3) ವಿಶ್ವ ಆಟಿಸಂ ಜಾಗೃತಿ ದಿನ**

ಆಟಿಸಂ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಜನರಿಗೆ ಅದರ ಬಗ್ಗೆ ಶಿಕ್ಷಣ ನೀಡಲು ಏಪ್ರಿಲ್ 2 ರಂದು ವಿಶ್ವ ಆಟಿಸಂ ಜಾಗೃತಿ ದಿನವನ್ನು ಆಚರಿಸಲಾಗುತ್ತದೆ.

**4) ಅಂತರರಾಷ್ಟ್ರೀಯ ಸತ್ಯ ಪರಿಶೀಲನಾ ದಿನ**

ಏಪ್ರಿಲ್ 2 ರಂದು, ಜಗತ್ತು ಅಂತರರಾಷ್ಟ್ರೀಯ ಸತ್ಯ ಪರಿಶೀಲನಾ ದಿನವನ್ನು ಆಚರಿಸುತ್ತದೆ, ಇದು ದಾಖಲೆಯನ್ನು ಸರಿಪಡಿಸುವುದು ಮತ್ತು ಸಾರ್ವಜನಿಕರನ್ನು ಸುಳ್ಳು ಮಾಹಿತಿ ಅಥವಾ "ನಕಲಿ ಸುದ್ದಿ" ಯಿಂದ ರಕ್ಷಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ವಿಶ್ವಾದ್ಯಂತ ಹಲವಾರು ಮಾಧ್ಯಮಗಳೊಂದಿಗೆ ಸಹಕರಿಸುವ ಅಂತರರಾಷ್ಟ್ರೀಯ ಸತ್ಯ ಪರಿಶೀಲನಾ ಜಾಲ (I.F.C.N.), ಅದರ ಅಧಿಕೃತ ಪ್ರಚಾರಕ್ಕೆ ಕಾರಣವಾಗಿದೆ.

## ಸುಭಾಷಿತ


ಸದ್ವರ್ತನೆ ಮತ್ತು ವಿನಯದ ಮಾತುಗಳು
ಎಂಥದೇ ಕಠಿಣ ಪರಿಸ್ಥಿತಿಯಲ್ಲೂ ನಮ್ಮನ್ನು
ಪಾರು ಮಾಡಬಲ್ಲವು.

ಸರ್ ಜಾನ್ ವಾಂಬರ್ಗ್

# ಬೆಂಗಳೂರು ಸಂಚಾರ ದಟ್ಟಣೆ ಸುಧಾರಿಸಲು ಸಂಚಾರ ಪೊಲೀಸ್, ಐಆರ್‌ಟಿಇ ಹಾಗೂ ಡಿಯಾಜಿಯೋ ಸಹಭಾಗಿತ್ವದಲ್ಲಿ ಅಧ್ಯಯನ

**ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಮತ್ತು ರಸ್ತೆ ಸುರಕ್ಷತಾ ಸವಾಲನ್ನು ಸುಧಾರಿಸುವ ಹಿನ್ನೆಲೆಯಲ್ಲಿ ಬೆಂಗಳೂರು ಸಂಚಾರ ಪೊಲೀಸ್ ಇಲಾಖೆ, ರಸ್ತೆ ಸಂಚಾರ ಶಿಕ್ಷಣ ಸಂಸ್ಥೆ (ಐಆರ್‌ಟಿಇ) ಹಾಗೂ ಡಿಯಾಜಿಯೋ ಇಂಡಿಯಾ ಸಹಯೋಗದಲ್ಲಿ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ಸುಧಾರಣೆಗಾಗಿ ಅಧ್ಯಯನ ನಡೆಸಿದೆ.**

ಈ ಅಧ್ಯಯನಕ್ಕಾಗಿ ಚಾಲುಕ್ಯ ಸರ್ಕಲ್, ಕಂಟೋನ್ಮೆಂಟ್ ರೈಲು ನಿಲ್ದಾಣ ಜಂಕ್ಷನ್, ಎಚ್. ಸಿದ್ದಯ್ಯ ವೃತ್ತವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು, ಈ ಮೂರು ಜಂಕ್ಷನ್‌ಗಳಲ್ಲಿ ವೈಜ್ಞಾನಿಕ ವಿಧಾನದಲ್ಲಿ ಸಂಚಾರ ಪ್ರಮಾಣ, ರಸ್ತೆ ಬಳಕೆದಾರರ ವರ್ತನೆ ಮತ್ತು ಸುರಕ್ಷತಾ ಅಂಶಗಳ ವಿಶ್ಲೇಷಣೆ ನಡೆಸಿದೆ, ಹಾಗೆಯೇ, ತಳಮಟ್ಟದ ಸಂಶೋಧನೆ, ವಾಹನಗಳ ದಟ್ಟಣೆಯ ಟ್ರಾಕಿಂಗ್, ಸಾಮರ್ಥ್ಯ ವೃದ್ಧಿಗೆ ತೆಗೆದುಕೊಳ್ಳಬಹುದಾಗ ಕ್ರಮಗಳ ಬಗ್ಗೆಯೂ ಅಧ್ಯಯನ ನಡೆಸಿದೆ. ಜೊತೆಗೆ,ಅಧ್ಯಯನವು ಸಂಚಾರ ಚಲನವಲನ, ಪಾದಚಾರಿಗಳ ನಡೆ, ರಸ್ತೆ ವಿನ್ಯಾಸದ ಪರಿಣಾಮ ಹಾಗೂ ಯೋಜನಾ ಸುಧಾರಣೆಗಳ ಬಗ್ಗೆ ಪ್ರಮುಖ ತಿಳುವಳಿಕೆ




ನೀಡಿದ್ದು, ಸಂಚಾರ ಮಾರ್ಗ ವಿಭಜನೆ, ಪಾದಚಾರಿಗಳ ಸುರಕ್ಷಿತ ರಸ್ತೆ ದ್ವೀಪಗಳು, ಸಿಗ್ನಲ್ ವ್ಯವಸ್ಥೆ ಸುಧಾರಣೆ ಮತ್ತು ಸೂಚನಾ ಫಲಕಗಳ ಅಭಿವೃದ್ಧಿ ಸೇರಿದಂತೆ ಕಡಿಮೆ ವೆಚ್ಚದ ಕ್ರಮಗಳನ್ನು ಶಿಫಾರಸು ಮಾಡಲಾಗಿದೆ. ಈ ಯೋಜನೆಯ ಭಾಗವಾಗಿ ಎರಡು ದಿನಗಳ ಕಾಲ ಸಂಚಾರ ಪೊಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ ನಡೆಸಲಾಗಿದ್ದು, ಸಂಚಾರ ಅಭಿಯಂತ್ರಣ, ರಸ್ತೆ ಸುರಕ್ಷತಾ ಪರಿಶೀಲನೆ ಹಾಗೂ ನಿಯಮಗಳ ಅನುಷ್ಠಾನ ಕುರಿತು ತಿಳುವಳಿಕೆ ನೀಡಲಾಗಿದೆ.

ಈ ಕುರಿತು ಮಾತನಾಡಿದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ, "ಬೆಂಗಳೂರಿನಂತಹ ನಗರದಲ್ಲಿ ಸಂಚಾರ ನಿರ್ವಹಣೆಗೆ ಕೇವಲ ಕಾನೂನು ಜಾರಿಯಷ್ಟೇ ಸಾಲದು; ರಸ್ತೆ ವಿನ್ಯಾಸ ಮತ್ತು ನೆಲಮಟ್ಟದ ವಾಸ್ತವತೆಗಳ ಅರಿವು ಅಗತ್ಯ. ಇಂತಹ ಉಪಕ್ರಮಗಳು ಅಧಿಕಾರಿಗಳ ಸಾಮರ್ಥ್ಯವನ್ನು ಹೆಚ್ಚಿಸಿ, ದೈನಂದಿನ ಸಂಚಾರ ನಿರ್ವಹಣೆಗೆ ತಾಂತ್ರಿಕ ತಿಳುವಳಿಕೆಯನ್ನು ಒದಗಿಸುತ್ತವೆ," ಎಂದರು.

ಡಿಯಾಜಿಯೋ ಇಂಡಿಯಾದ ಕಾರ್ಪೊರೇಟ್ ಸಂಬಂಧಗಳ ನಿರ್ದೇಶಕ ದೇವಾಶಿಶ್ ದಾಸ್‌ಗುಪ್ತ ಮಾತನಾಡಿ, "ನಗರ ಸಂಚಾರ ಸಮಸ್ಯೆಗಳನ್ನು ವೈಜ್ಞಾನಿಕ ಹಾಗೂ ಅಂಕಿ-ಅಂಶ ಆಧಾರಿತವಾಗಿ ಎದುರಿಸಲು ಈ ಸಹಭಾಗಿತ್ವ ಸಹಕಾರಿಯಾಗುತ್ತದೆ. ಪ್ರಾರಂಭದಲ್ಲಿ ಮೂರು ಪ್ರಮುಖ ಜಂಕ್ಷನ್‌ಗಳಲ್ಲಿ ಅಧ್ಯಯನ ನಡೆಸಿ, ಹಂತ ಹಂತವಾಗಿ ವಿಸ್ತರಿಸುವ ಉದ್ದೇಶವಿದೆ," ಎಂದು ಹೇಳಿದರು.

ಐಆರ್‌ಟಿಇ ಅಧ್ಯಕ್ಷ ರೋಹಿತ್ ಬಲೂಜಾ ಮಾತನಾಡಿ, "ಸಂಚಾರ ನಿಯಂತ್ರಣವು ಕೇವಲ ಕಾನೂನು ಜಾರಿಯ ವಿಷಯವಲ್ಲ; ಅದು ಸಂಚಾರ ಅಭಿಯಂತ್ರಣದ ತತ್ವಗಳ ಮೇಲೆ ಆಧಾರಿತವಾಗಿದೆ. ರಸ್ತೆ ವಿನ್ಯಾಸ, ಜಾರಿಗೆ ಮತ್ತು ನಿರ್ವಹಣೆಯ ಸಮನ್ವಯದಿಂದ ಮಾತ್ರ ದೀರ್ಘಕಾಲಿಕ ಸುಧಾರಣೆ ಸಾಧ್ಯ. ಸಂಚಾರ ಪೊಲೀಸರ ತಾಂತ್ರಿಕ ಸಾಮರ್ಥ್ಯವನ್ನು ಬಲಪಡಿಸುವುದು ಅತ್ಯಗತ್ಯ," ಎಂದು ಹೇಳಿದರು.

ಈ ಉಪಕ್ರಮವು ಸಂಶೋಧನೆ, ಅಭಿಯಂತ್ರಣ ಪರಿಹಾರ ಮತ್ತು ತರಬೇತಿಯನ್ನು ಒಟ್ಟುಗೂಡಿಸಿ, ನಗರ ಸಂಚಾರ ಸುಧಾರಣೆಗೆ ಮಾದರಿಯಾಗಿ ಪರಿಣಮಿಸುವ ನಿರೀಕ್ಷೆ ಇದೆ.

# ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನಿಂದ ಛತ್ರಪತಿ ಶಿವಾಜಿ 399ನೇ ಜಯಂತೋತ್ಸವ ಜಿಲ್ಲಾ ಸಮಾವೇಶ




**ನೈಜ್ಯ ದೇಸೆ ನ್ಯೂಸ್**

**ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನಿಂದ ಜಿಲ್ಲಾ ಸಮಾವೇಶ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತೋತ್ಸವದ ಕಾರ್ಯಕ್ರಮವನ್ನು ಸಿಂಧನೂರು ತಾಲೂಕು ಘಟಕದಿಂದ ನಗರದ ಕನಕದಾಸ ಕಲ್ಯಾಣ ಮಂಟಪದಲ್ಲಿ ಏ.5 ರಂದು ಶುಕ್ರವಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಧ್ಯಕ್ಷರಾದ ನಾಗೋಜಿರಾವ್ ಕರಾಡೆ ತಿಳಿಸಿದರು.**

ಬುಧುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸಮಾಜದ ಜಗದ್ಗುರುಗಳಾದ ಶ್ರೀ ಗೋಸಾಯಿಮಠ ಗವಿಪುರಂನ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ, ಪುಣೆಯ ಶ್ರೀ ಧ್ಯಾನಶ್ರೀದಾದ ಮಹಾರಾಜ ನಗರಕರ್ ವಹಿಸಲಿದ್ದು, ಮಾಜಿ ಸಚಿವರು, ರಾಜ್ಯ ಮುಖ್ಯ ಆಯುಕ್ತ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನ ಡಾ.ಪಿ.ಜಿ.ಆರ್ ಸಿಂಧ್ಯಾ ಹಾಗೂ ಸಣ್ಣ ಕೈಗಾರಿಕೆ ಸಚಿವ ಎನ್.ಎಸ್.ಬೋಸರಾಜು ಉದ್ಘಾಟಿಸಲಿದ್ದಾರೆ.

ಕಾರ್ಮಿಕ ಸಚಿವ ಎಸ್.ಸಂತೋಷಲಾಡ್, ಆರ್.ವಿ. ದೇಶಪಾಂಡೆ, ಎಸ್.ಆರ್.ಸಿಂಧ್ಯಾ, ಶ್ರೀನಿವಾಸ ಮಾನೆ, ವಿಜಯಸಿಂಗ್, ಡಾ.ಎಮ್.ಜಿ.ಮೂಳೆ, ಸೇರಿದಂತೆ ಸ್ಥಳಿಯ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಇರಲಿದ್ದಾರೆ. ನಂತರ ಅಂಧ, ಅಂಗವಿಕಲ, ವೃದ್ಧಾಪ್ಯದ ಜನರಿಗೆ, ವಿಧವಾ, ಹಾಗೂ ಸಮಾಜದ 200 ಜನರಿಗೆ ಸ್ಕಾಲರ್ ಶಿಪ್ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ವೇಳೆ: ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶೋಕ ನಾನ್ನೂರೆ, ಸುಭಾಷ್ ಗೋಮರ್ಸಿ, ಸುರೇಶರಾವ್ ಬಾಗಲವಾಡ, ರಾಘವೇಂದ್ರ ಪವಾರ್, ರಘು ನಾನ್ನೂರೆ, ಹನುಮೇಶ ಜಾದವ್, ಮಂಜುನಾಥ ಜಾಲಿಹಾಳ, ಖಂಡೋಜಿರಾವ್ ಸಿಂಧೆ, ಸೇರಿದಂತೆ ಸಮಾಜದ ಅನೇಕ ಮುಖಂಡರಿದ್ದರು.

# ಶಾಸಕ ಬಸನಗೌಡ ಪಾಟೀಲ ಯತ್ನಾಳಗೆ ಗೌರವ ಸಮರ್ಪಣೆ

**ನೈಜ್ಯ ದೇಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದಲ್ಲಿ ಶ್ರೀರಾಮ ನವಮಿ ಉತ್ಸವ ಸಮಿತಿ(ರಿ) ವತಿಯಿಂದ ಸೋಮವಾರ ಸಂಜೆ ಆಯೋಜಿಸಿದ ಎರಡನೇ ವರ್ಷದ ಶ್ರೀರಾಮ ನವಮಿ ಉತ್ಸವ ಹಾಗೂ ಭವ್ಯ ಶೋಭಾಯಾತ್ರೆ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಆಗಮಿಸಿದ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ(ಯತ್ನಾಳ) ಇವರನ್ನು ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**

ಈ ಸಮಯದಲ್ಲಿ ಶ್ರೀರಾಮ ನವಮಿ ಉತ್ಸವ ಸಮಿತಿ(ರಿ) ಅಧ್ಯಕ್ಷ ಅಮೀತಸಿಂಗ್ ಮನಗೂಳಿ, ಉಪಾಧ್ಯಕ್ಷ




ಸೂರಜ ಹಜೇರಿ, ಸಮಿತಿಯ ಪದಾಧಿಕಾರಿಗಳಾದ ಗೋವಿಂದಸಿಂಗ್ ಹಜೇರಿ, ಸುಧೀರ ತಿವಾರಿ,ರಾಘು ಹಜೇರಿ, ವಿಠ್ಠಲಸಿಂಗ್ ಹಜೇರಿ, ನಿತಿನ್ ವಿಜಾಪುರ,ರಾಜು ಹಜೇರಿ, ಚಂದ್ರು ರಜಪೂತ ಹಾಗೂ ಸರ್ವ ಸಮಾಜದ ಗಣ್ಯರು ಹಾಗೂ ಯುವಕರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಏಪ್ರಿಲ್ 1ರಿಂದ ಸ್ವಯಂ ಗಣತಿ ಆರಂಭ, ಸಾರ್ವಜನಿಕರ ಸಹಕರಿಸಿ :ತಹಶೀಲ್ದಾರ್

**ನೈಜ್ಯ ದೇಸೆ ನ್ಯೂಸ್**

**ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಜನಗಣತಿ 2027ರ ಅಂಗವಾಗಿ ಮೇಲ್ವಿಚಾರಕರ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಭೀಮರಾಯ ಬಿ. ರಾಮಸಮುದ್ರ ಸ್ವಯಂ ಗಣತಿಗೆ ಚಾಲನೆ ನೀಡಿ ಮಾತನಾಡಿ, ಭಾರತ ಸರ್ಕಾರವು ದೇಶದ ಆರ್ಥಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಸ್ಥಿತಿಗತಿಗಳ ಅಭಿವೃದ್ಧಿಗಾಗಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನಗಣತಿಯನ್ನು ಹಮ್ಮಿಕೊಂಡಿದೆ ಎಂದು ಹೇಳಿದರು.**

ರಾಜ್ಯದಲ್ಲಿ ಏಪ್ರಿಲ್ 1ರಿಂದ 15ರವರೆಗೆ ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಅಧಿಕೃತ ಪೋರ್ಟಲ್‌ಗೆ ಭೇಟಿ ನೀಡಿ ಸ್ವಯಂ ಗಣತಿಯನ್ನು ಸುಲಭವಾಗಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ನಂತರದ ಹಂತದಲ್ಲಿ ಏಪ್ರಿಲ್ 16ರಿಂದ ಮೇ 15ರವರೆಗೆ



ಮನೆ ಪಟ್ಟಿ ಕಾರ್ಯ ನಡೆಯಲಿದೆ. ಪಟ್ಟಣ ಪ್ರದೇಶದಲ್ಲಿ ಪುರಸಭೆ ಮುಖ್ಯಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ಗ್ರಾಮೀಣ ಭಾಗದಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ 46 ಮೇಲ್ವಿಚಾರಕರು ಮತ್ತು 247 ಗಣತಿದಾರರ ಮೂಲಕ ಜನಗಣತಿ ಕಾರ್ಯ ನಡೆಸಲಾಗುತ್ತದೆ ಎಂದು ತಿಳಿಸಿದರು.

ಜನಗಣತಿದಾರರಿಗೆ ಏಪ್ರಿಲ್ 3 ಮತ್ತು 4ರಂದು ಪಟ್ಟಣದಲ್ಲಿ ತರಬೇತಿ ನೀಡಲಾಗುವುದು. ಸಾರ್ವಜನಿಕರು ಜನಗಣತಿಯಲ್ಲಿ ಭಾಗವಹಿಸಿ ಗಣತಿದಾರರಿಗೆ ಅಗತ್ಯ ಮಾಹಿತಿಯನ್ನು ನೀಡುವ ಮೂಲಕ ಸಹಕಾರ ನೀಡುವಂತೆ ಅವರು ಕೋರಿದರು.


ಈ ಸಂದರ್ಭದಲ್ಲಿ ತರಬೇತಿದಾರರಾದ ಶ್ರೀಕಾಂತ ಬಾಗೇವಾಡಿ, ಚನ್ನಬಸವರಾಜ ಮಾಡಗಿರಿ, ಬಸವರಾಜ, ಹರೀಷ್ ಅವರು ಮೇಲ್ವಿಚಾರಕರಿಗೆ ಅಗತ್ಯ ತರಬೇತಿಯನ್ನು ನೀಡಿದರು.

# ಗುಲಬರ್ಗಾ ವಿವಿ.43ನೇ ಘಟಿಕೋತ್ಸವ ಸಾಧಕ ಮಂಜುನಾಥ ಉಪನ್ಯಾಕರಿಗೆ ಕೆ.ಶಿವನಗೌಡನಾಯಕರವರ ಅಭಿಮಾನಿಬಳಗದವತಿಯಿಂದ ಅಭಿನಂದಾನ ಸಮಾರಂಭ

**ನೈಜ್ಯ ದೇಸೆ ನ್ಯೂಸ್**

**ಅರಕೇರಾ: ಜೀವನದಲ್ಲಿ ಯಶಸ್ಸು ಸಾಧಿಸಲು ಜ್ಞಾನ ಅತ್ಯಂತ ಮುಖ್ಯ ನಿರಂತಕ ಕಲಿಕೆಯ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ಜ್ಞಾನವನ್ನು ನವೀಕರಿಸಿಕೊಳ್ಳಬೇಕು ಎಂದು ಬಿಜೆಪಿ ಹಿರಿಯ ಮುಖಂಡರಾದ ಕೆ.ಅನಂತರಾಜನಾಯಕ ಹೇಳಿದರು.**

ಅವರು ಅರಕೇರಾ ಪಟ್ಟಣದಲ್ಲಿನ ಶ್ರೀಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗೌರವ ಡಾಕ್ಟರೇಟರ್ ಪದವಿ ಪಡೆದಿರುವ ಇಂಗ್ಲೀಷ ಉಪನ್ಯಾಸಕರಾದ ಮಂಜುನಾಥ ಇವರಿಗೆ ಕೆ.ಶಿವನಗೌಡನಾಯರವರ್ ಅಭಿಮಾನಿ ಬಳಗದವತಿಯಿಂದ ಹಮ್ಮಿಕೊಂಡಿದ್ದ ಅಭಿನಂದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ಗುಲ್ಬರ್ಗಾ ವಿಶ್ವವಿದ್ಯಾಲಯದ 43ನೇ ಘಟಿಕೋತ್ಸವದಲ್ಲಿ ಶ್ರೀ ಮಂಜುನಾಥ ಉಪನ್ಯಾಕಸರು ಇಂಗ್ಲೀಷ ವಿಷಯದಲ್ಲಿ ಪಿ ಎಸ್ ಡಿ ಗೌರವ (ಡಾಕ್ಟರೇಟ್) ಪದವಿಯನ್ನು



ರಾಜ್ಯದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪದವಿ ಪ್ರದಾನ ಸ್ವೀಕರಿಸಿದ್ದುನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ..

ಮಂಜುನಾಥ ಉಪನ್ಯಾಸಕರು ಇನ್ನೂ ಉನ್ನತ ಹುದ್ದೆಗಳು ಲಭಿಸುವಂತಾಗಲಿ ಎಂದು ಹಾರೈಸಿದರು. ಕೆ.ಶಿವನಗೌಡನಾಯಕ ಅವರ ಅವಧಿಯಲ್ಲಿ ದೇವದುರ್ಗ ಮತ್ತು ಅರಕೇರಾ ತಾಲೂಕಿನಲ್ಲಿ ವಿವಿಧ ಗ್ರಾಮಗಳಲ್ಲಿ ಶಾಲಾ ಕಾಲೇಜು ,ಆಶ್ರಮಶಾಲೆ ,ವಸತಿನಿಲಯಗಳ ಕಟ್ಟಡಗಳು ನಿರ್ಮಾಣಗೊಂಡಿವೆ ಅಲ್ಲದೇ ಗ್ರಾಮೀಣಾ ಭಾಗದ ರಸ್ತೆ,ಕುಡಿಯುವ ನೀರು ಸೇರಿದಂತೆ ಸಾಕಷ್ಟು ಅಭಿವೃದ್ದಿಗೊಂಡಿವೆ. ಕ,ಶಿವನಗೌಡನಾಯಕರವರ ನೇತೃತ್ವದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತು ಶೈಕ್ಷಣಿಕ ಸುಧಾರಣೆಗಳಿಗೆ ಕೆ.ಎಸ್ ಎನ್ ಬಳಗವು ಸದಾ ಸಕ್ರೀಯವಾಗಿರುತ್ತದೆ ಡಾ. ಎಚ್ ಎ.ನಾಡಗೌಡ ರಾಯಚೂರು ರಿಮ್ಸ್ ಮಾಜಿ ನಾಮನಿರ್ದೇಶಿತ ಸದಸ್ಯರು ಮಾತನಾಡಿ ಮಂಜುನಾಥ ಉಪನ್ಯಾಸಕರು ಡಾಕ್ಟರೇಟರ್ ಪದವಿ ಪಡೆದಿದ್ದು ನಮ್ಮ ಅರಕೇರಾ ತಾಲೂಕಿಗೆ ಹೆಮ್ಮೆಯ ವಿಷಯವಾಗಿದ್ದು ಇವರ ಈ ಸಾಧನೆ ನಮ್ಮ ಗ್ರಾಮೀಣಾ ಪ್ರದೇಶದ ಯುವ ಜನತೆಗೆ ಸ್ಪೂರ್ತೀಯಾಗಲಿ ಎಂದರು.

ವೆಂಕಟೇಶ ನಾಯಕ ದೊರೆ ಅರಕೇರಾ ಬಿಜೆಪಿ ನಗರ ಘಟಕ ಅಧ್ಯಕ್ಷರು ಗೌರವ ಡಾಕ್ಟರೇಟರ್ ಪದವಿ ಪಡೆಯುವದು ಸುಲಭ ಮಾರ್ಗವಲ್ಲ,ಮೇಲಾಗಿ ಇದಕ್ಕಾಗಿ ವಿಶೇಷ ಸಂಶೋಧನೆ ಮತ್ತು ಕಠಿಣ ಪರಿಶ್ರಮ ಹಾಗೂ ವಿಷಯ ಮಂಡನೆಯ ಆಧಾರದ ಮೇಲೆ ಡಾಕ್ಟರೇಟರ್ ಪದವಿ ನೀಡಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಟ್ಟಣದ ಮುಖಂಡರಾದ ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್. ಕೆ.ಭಗವಂತ್ರಾಯನಾಯಕ. ಸೀತಣ್ಣನಾಯಕ ಗುರಿಕಾರ, ಹನುಮಂತ್ರಾಯ ಪೂಜಾರಿ,ಜಾವೀದ್ ಆರ್ ಚಿಂಚೋಳಿಕರ್. ಪ್ರಾಚಾರ್ಯರಾದ ಬುದ್ದಿವಂತಿ,ಮೋನಪ್ಪ ಅರಕೇರಾ ತಾಲೂಕು ಅಧ್ಯಕ್ಷರು ಬಂಜಾರ ಸಮಾಜ ಹಾರೂನ್ ಅರಕೇರಾ ಮಂಡಲದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರು ,ನಾಗರಾಜಕರ್ನಾಳ,,ರವಿನಾಯಕ, ತನುಜಕುಮಾರ ಕುರುಕುಂದಿ,ಅಬ್ದುಲ್ ಮಾಜಿಧ್,ದೇವಿಂದ್ರನಾಯಕ ಜುಟ್ಟಮರಡಿ. ವೆಂಕಟೇಶನಾಯಕ ಕರ್ನಾಳ. ಬೀಮಣ್ಣನಾಯಕ ಕೊಣಚಪ್ಪಳಿ.

ವಿಶ್ವನಾಥ ಹೋಸಮನಿ,ಬೀಮಣ್ಣನಗರ, ತಿಮ್ಮಣ್ಣ ಗುರಿಕಾರ,ವಿರೇಶಬೇರಿ, ಬಸವ ಉಪ್ಪಾರ,ಯಲ್ಲಪ್ಪ ಕರ್ನಾಳ ಸುರೇಶ,ಸಂಗಮೇಶ ಬಂಡೆಗುಡ್ಡ, ರಮೇಶ ಪವಾರ, ಬೂದೆಪ್ಪ ರಮೇಶ ಪವಾರ ಸೇರಿದಂತೆ

## ಸಾಹಿತ್ಯ ಸಿಂಚನ

ಕಾವ್ಯಲಹರಿ..!

ಭಾವದ ಕುಲುಮೆಯಲ್ಲಿ
ಪದಗಳು ಹೊರಳಿ
ನರಳಿ ಅರಳಬೇಕು
ಸುಂದರ ಸುಮಧುರ
ಅಪೂರ್ವ ಕವಿತೆಗಳಾಗಿ
ಮಿನುಗಿ ಹೊಳೆಯಬೇಕು.!

ಅರಿವಿನ ಒಲುಮೆಯಲ್ಲಿ
ಶಬ್ದಗಳು ಬಾಗಿ
ಮಾಗಿ ಬೀಗಬೇಕು
ಜ್ವಲಿಸಿ ಪ್ರಜ್ವಲಿಸಿ
ಅಕ್ಷರ ಪ್ರಣತೆಗಳಾಗಿ
ಬೆಳಗುತ್ತ ಬೆಳಕಾಗಬೇಕು.!

ಅನುಭವದ ಚಿಲುಮೆಯಲ್ಲಿ
ಚಿಂತನೆಗಳು ಮಿಂದು
ನೆನೆದು ಶುಭ್ರವಾಗಬೇಕು.
ನಿರ್ಮಲ ನಿಷ್ಕಲ್ಮಶ
ಚೈತನ್ಯದ ಒರತೆಗಳಾಗಿ
ಹರಿದು ಹಸಿರಾಗಬೇಕು.!

ಸತ್ಯಗಳ ನಿಲುಮೆಯಲ್ಲಿ
ತತ್ವಗಳು ಸಾತ್ವಿಕವಾಗಿ
ತಾತ್ವಿಕವಾಗಿ ದೃಢವಾಗಬೇಕು..
ದಿಟ್ಟವಾಗಿ ದಟ್ಟವಾಗಿ
ಸತ್ವಯುತ ಸಮತೆಗಳಾಗಿ
ಸ್ಫುರಿದು ಸಾಕಾರವಾಗಬೇಕು.!

ಜೀವದ ನಲುಮೆಯಲ್ಲಿ
ಸ್ವರಗಳು ಸುಸ್ವರಗಳಾಗಿ
ನಾದವಾಗಿ ನಿನಾದವಾಗಬೇಕು..
ಹೃದ್ಯವಾಗಿ ಪದ್ಯವಾಗಿ
ಮಧುಮಧುರ ಗೀತೆಗಳಾಗಿ
ಮಾರ್ದನಿಸಿ ಝೇಂಕಾರವಾಗಬೇಕು.!

ಎ.ಎನ್.ರಮೇಶ್. ಗುಬ್ಬಿ.

## ಶ್ರೀಕೃಷ್ಣದೇವರಾಯ ವಿದ್ಯಾ ಸಂಸ್ಥೆಗೆ ಸೈನಿಕ ಶಾಲೆ ಮಂಜೂರು ಉದ್ಘಾಟನೆ: ಬಿ.ವೆಂಕಟರಾವ್

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಹೊರವಲಯದ ಇ.ಜೆ ಹೊಸಳ್ಳಿ ಕ್ಯಾಂಪಿನಲ್ಲಿರುವ ಶ್ರೀ ಕೃಷ್ಣದೇವರಾಯ ವಿದ್ಯಾ ಸಂಸ್ಥೆಗೆ ಸೈನಿಕ ಶಾಲೆ ಮಂಜೂರಾಗಿದ್ದು, ಏಪ್ರಿಲ್ 4 ರಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆಯ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಬಿ.ವೆಂಕಟರಾವ್ ತಿಳಿಸಿದರು.**




ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೇಂದ್ರ ರಾಜ್ಯ ಸಚಿವ ಸಂಜಯ್ ಸೇಠ್ ಅವರಿಂದ ಶಾಲಾ ಕೊಠಡಿಗಳ ಉದ್ಘಾಟನೆ ಹಾಗೂ ಆಂಧ್ರ ಪ್ರದೇಶ ಸರ್ಕಾರದ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಸಚಿವರಾದ ನಾರಾ ಲೋಕೇಶ ಸೈನಿಕ ಶಾಲಾ ಹಾಸ್ಟೆಲ್ ಮತ್ತು ಎನ್.ಟಿ.ಆರ್. ಅವರ ಪ್ರತಿಮೆ ಅನಾವರಣ ಮಾಡುವರು, ಕರ್ನಾಟಕದಲ್ಲಿ ಮಂಜೂರಾದ 4 ಖಾಸಗಿ ಸೈನಿಕ ಶಾಲೆಗಳಲ್ಲಿ ಸಿಂಧನೂರಿನ ಶ್ರೀ ಕೃಷ್ಣದೇವರಾಯ ಶಾಲೆಯು ಒಂದಾಗಿದ್ದು, ಈ ಸೈನಿಕ ಶಾಲೆಗೆ 120 ಸೀಟುಗಳ ಮಾತ್ರ ಭರ್ತಿಗೆ ಅವಕಾಶವಿದೆ. 30 ಸೀಟುಗಳು ವಿದ್ಯಾರ್ಥಿನಿಯರು, 90 ಸೀಟು ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. ಜೂನ್ 26ರಿಂದ ಪ್ರವೇಶಾತಿ ಪ್ರಾರಂಭಿಸಲಾಗುವುದು. ಈಗಾಗಲೇ ಅರ್ಜಿ ಸಲ್ಲಿಸಿದವರು ಶಾಲೆಗೆ ಬಂದು ಭೇಟಿ ನೀಡಿ ಮಾಹಿತಿ ಪಡೆಯುತ್ತಿದ್ದಾರೆ ಎಂದರು. ನಂತರ ಜಿ.ಎಸ್.ಸತ್ಯನಾರಾಯಣ ಮಾತನಾಡಿ, ಖಾಸಗಿ ಶಾಲೆಗೆ ಸೈನಿಕ ಶಾಲೆಯನ್ನು ನೀಡಿರುವುದು ರಾಯಚೂರು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ. ನಮ್ಮ ಸಂಸ್ಥೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಾಸ್ ಆದವರಿಗೆ ಮೊದಲ ಆದ್ಯತೆ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ಎಸ್.ತಂಗಡಗಿ ಸೈನಿಕ ಸ್ಕೂಲ್ ವೆಬ್‌ಸೈಟ್ ಲಾಂಚ್ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಶ್ರೀಬಸವೇಶ್ವರರ ಪುತ್ಥಳಿಯನ್ನ ವೈದ್ಯಕೀಯ ಶಿಕ್ಷಣ ಹಾಗ ಕೌಶಲ್ಯ ಅಭಿವೃದ್ಧಿ ಖಾತೆಯ ಕ್ಯಾಬಿನೆಟ್ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಉದ್ಘಾಟಿಸಲಿದ್ದಾರೆ. ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಇವರಿಂದ ಡಾ.ರಾಧಾಕೃಷ್ಣ ಕಲಾಧಾಮ ಉದ್ಘಾಟನೆ ನೆರವೇರಿಸುವರು ಎಂದರು. ಗೌರವ ಅತಿಥಿಗಳಾಗಿ ಮಾತುಕುಮಿಲ್ಲಿ ಶ್ರೀಭರತ್ ಎಂಪಿ ವಿಶಾಖಪಟ್ಟಣಂ ಆಂಧ್ರಪ್ರದೇಶ, ಕೊಪ್ಪಳ ಸಂಸದ ಕೆ.ರಾಜಶೇಖರ ಹಿಟ್ನಾಳ್, ಸ್ಥಳೀಯ ಶಾಸಕ ಹಂಪನಗೌಡ ಬಾದರ್ಲಿ, ಎಂಎಲ್‌ಸಿ ಬಸನಗೌಡ ಬಾದರ್ಲಿ, ವಿಶೇಷ ಆಹ್ವಾನಿತರಾಗಿ ಮಾಜಿ ಸಚಿವರು ಕೆಓಎಫ್ ಅಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಕೊಪ್ಪಳ ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ಪಿ.ವಿ.ರಾವ್ ಅಮೃತಾ ಕನ್ಸಟ್ರಕ್ಸನ್ ಬೆಂಗಳೂರು ಇವರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮನವಿ ಮಾಡಿದರು. ಈ ವೇಳೆ: ನಾಗೇಶರಾವ್, ಕೆ.ಸುಬ್ಬರಾವ್, ಚಿಟ್ಟೂರಿ ಶ್ರೀನಿವಾಸ, ಬಿ.ಹರ್ಷ, ಸಾಯಿರಾಂ, ಸೇರಿದಂತೆ ಅನೇಕರಿದ್ದರು.

## ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ: ಹೆಚ್‌ಐವಿ ಸ್ಥಿತಿಯನ್ನು ತಿಳಿಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಿರಿ.: ಡಾ ಸುರೇಂದ್ರ ಬಾಬು.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೀವನದ ಕೆಲವು ಘಟನೆಗಳಿಂದ ಆಕಸ್ಮಿಕವಾಗಿ ಅಥವಾ ಗೊತ್ತಿಲ್ಲದೆಯೇ ಹೆಚ್‌ಐವಿ ಸೋಂಕಿನ ಸಾಧ್ಯತೆಗಳನ್ನು ಆರಂಭದಲ್ಲಿಯೇ ಗುರ್ತಿಸಲು ಹಾಗೂ ಅಪಾಯಕಾರಿ ಯಾಗಬಹುದಾದ ಸನ್ನಿವೇಶಗಳಿಂದ ದೂರವಾಗಲು ಯಾವ ಸಂಕೋಚವಿಲ್ಲದೆ ಮೊಬೈಲ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಸ್ಥಿತಿ ತಿಳಿಯಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.**

ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ರಾಯಚೂರು ರವರ ಆಶ್ರಯದಲ್ಲಿ ಇಲಾಖೆಯ ಕೃಷ್ಣ ಸಭಾಂಗಣದಲ್ಲಿ ಏರ್ಪಡಿಸಿದ್ದ, ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ-2026 ರ ಮೂಲಕ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಅಸುರಕ್ಷಿತ ಲೈಂಗಿಕ ಸಂಪರ್ಕ, ಅಸುರಕ್ಷಿತ ಸೂಜಿ ಸಿರೇಂಜ್ ಬಳಕೆ, ಪರೀಕ್ಷಿಸದ ಅಸುರಕ್ಷಿತವಾದ ರಕ್ತ ಪಡೆಯುವುದು, ಹಾಗೂ ಸೋಂಕಿತ ತಾಯಿಯಿಂದ ಮಗುವಿಗೆ ಬರುವ ಸಾಧ್ಯತೆಗಳನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕಿದೆ. ಇದಕ್ಕಾಗಿ ಹತ್ತಿರದ



ಸರಕಾರಿ ಆರೋಗ್ಯ ಕೇಂದ್ರಗಳ ಐಸಿಟಿಸಿ ಕೇಂದ್ರಗಳಲ್ಲಿ ಸೂಕ್ತ ಸಮಾಲೋಚನೆ, ಉಚಿತ ಪರೀಕ್ಷೆ, ಹಾಗೂ ಸೋಂಕು ಕಂಡುಬಂದಲ್ಲಿ ಗೌಪ್ಯತೆ ಕಾಪಾಡುವ ಮೂಲಕ ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ಪ್ರಾಸ್ತಾವಿವಾಗಿ ಮಾತನಾಡಿದ ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿ ಡಾ ಮಹಮ್ಮದ್ ಶಾಕೀರ್ ಮೊಹಿಯುದ್ದೀನ್, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ ನಂತರ ಪ್ರಶ್ನೋತ್ತರದ ಮೂಲಕ, ಅಥವಾ ಅವರಲ್ಲಿ ಸೊಂಕು ಹರಡಬಹುದಾದ ಸಾಧ್ಯತೆಗಳಿದ್ದಲ್ಲಿ ಕನಿಷ್ಟ ಶೇಖಡಾ 95 ರಷ್ಟು ಜನ ತಪಾಸಣೆ ಮಾಡಿಸಿಕೊಳ್ಳುವುದು, ಖಚಿತಪಟ್ಟ ಸೋಂಕಿತರಲ್ಲಿ ಶೇಕಡಾ 95 ರಷ್ಟು ಜನರನ್ನು ಎಆರ್‌ಟಿ ಕೇಂದ್ರಗಳಿಗೆ ಚಿಕಿತ್ಸೆಗೆ ಬರುವಂತೆ ಮಾಡುವುದು ಹಾಗೂ ಸೋಂಕಿತರಾಗಿ ಎಆರ್‌ಟಿ ಚಿಕಿತ್ಸೆ ಪಡೆಯುವವರಲ್ಲಿ ಶೇಖಡಾ 99 ರಷ್ಟು ಜನರನ್ನು ಸದಾ ನಿಗಾವಣೆ, ಆಪ್ತಸಮಾಲೋಚನೆಯಿಂದ ಚಿಕಿತ್ಸೆ ಬಿಡದಂತೆ ಆರೋಗ್ಯ ಶಿಕ್ಷಣ ನೀಡುವ ಮೂಲಕ ವೈರಲ್ ಲೋಡ್ ಹೆಚ್ಚಾಗದಂತೆ ಕ್ರಮ ವಹಿಸಲಾಗುವ ಅಭಿಯಾನವಾಗಿದ್ದು ಜಿಲ್ಲೆಯಲ್ಲಿ ಜನತೆಯಿಂದ ಉತ್ತಮ ಸ್ಪಂದನೆ ದೊರಕಿರುವುದು ಆಶಾದಾಯಕವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ ಕೆ, ಡಿಪಿಡಿಓ ಡಾ ಚಂದ್ರಶೇಖರಯ್ಯ ಸ್ವಾಮಿ, ನವೋದಯ ವೈದ್ಯಕೀಯ




ಮಹಾವಿದ್ಯಾಲಯದ ಪಿಎಸ್‌ಎಮ್ ವಿಭಾಗದ, ಡಾ ರೂಪಕಲಾ, ಡಾ ಪ್ರತಿಭಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಜಿಲ್ಲಾ ಏಡ್ಸ್ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಜಿಲ್ಲಾ ಕ್ಷಯರೋಗ ಕಾರ್ಯಕ್ರಮ ಸಂಯೋಜಕ ಅಮರೇಶ ಕುಮಾರ, ಡಿಪಿಪಿಎಮ್‌ಸಿ ಮೊಹೀನ್ ಪಾಶಾ, ಸಿಪಿಓ ಬಸವರಾಜಗೌಡ ಸೇರಿದಂತೆ ವೈದ್ಯರು, ವಿವಿಧ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಏಡ್ಸ್ ವಿಭಾಗದ ಸಿಬ್ಬಂದಿಯರು, ಎಸ್‌ಟಿಎಸ್, ಎಸ್‌ಟಿಎಲ್‌ಎಸ್ ಟಿಬಿ ವಿಭಾಗ, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

## ಸಿಂಧನೂರಿನಲ್ಲಿ ಭಾವೈಕ್ಯತೆಯ ಹಬ್ಬಗಳ ಸೌಹಾರ್ದ ಸಂಗಮ: ಏಪ್ರಿಲ್ 3 ರಂದು ವಿಶೇಷ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಾಡಿನ ಸಾಂಪ್ರದಾಯಿಕ ಯುಗಾದಿ ಮತ್ತು ಪವಿತ್ರ ರಂಜಾನ್ ಮಾಸದ ಹಿನ್ನೆಲೆಯಲ್ಲಿ, ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹೋದರತ್ವವನ್ನು ಸಾರಲು ಸಿಂಧನೂರಿನಲ್ಲಿ "ಹಬ್ಬಗಳ ಸೌಹಾರ್ದ ಸಂಗಮ" ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.**

ಸದ್ಭಾವನಾ ವೇದಿಕೆ ಸಿಂಧನೂರು, ಜಮಾಅತೆ ಇಸ್ಲಾಮಿ ಹಿಂದ್ ಸಿಂಧನೂರು ಹಾಗೂ ಭಾವೈಕ್ಯ ಶಾಂತಿ ಸಂದೇಶ ಸಂಸ್ಥೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮವು ನಡೆಯಲಿದೆ.ದಿನಾಂಕ: 03-04-2026, ಶುಕ್ರವಾರ ಸಂಜೆ 7:15 ಕ್ಕೆ ಮಿಲಾಪ್ ಶಾದಿ ಮಹಲ್, ಕೋಟೆ ಪ್ರದೇಶ, ಸಿಂಧನೂರು.ಜೀವನವೆಂಬುದು ಕಷ್ಟ-ಸುಖಗಳ (ಬೇವು-ಬೆಲ್ಲ) ಸಂಗಮವೆಂದು




ಸಾರುವ ಯುಗಾದಿ ಹಬ್ಬ ಹಾಗೂ ಒಂದು ತಿಂಗಳ ಕಾಲ ಉಪವಾಸದ ಮೂಲಕ ತಾಳ್ಮೆ, ಪ್ರೀತಿ ಮತ್ತು ತ್ಯಾಗದ ಮೌಲ್ಯಗಳನ್ನು ಕಲಿಸುವ ರಂಜಾನ್ ಹಬ್ಬ - ಇವೆರಡೂ ಸಮನ್ವಯಗೊಂಡು ಸಮಾಜದಲ್ಲಿ ಶಾಂತಿ ಮತ್ತು ಭಾವೈಕ್ಯತೆಯನ್ನು ಗಟ್ಟಿಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ಕಾರ್ಯಕ್ರಮದಲ್ಲಿ ಪ್ರಖ್ಯಾತ ಪ್ರವಚನಕಾರರಾದ ಶ್ರೀ ಮಹಾಂತಸ್ವಾಮಿಗಳು ಸಾಲಿಮಠ ಮುದಗಲ್ ಕಲ್ಯಾಣಾಶ್ರಮ ತಿಮ್ಮಾಪುರ ಹಾಗೂ ಪ್ರಖ್ಯಾತ ಪ್ರವಚನಕಾರರಾದ ಶ್ರೀ ಮುಹಮ್ಮದ್ ಕುಂಞ (ವ್ಯವಸ್ಥಾಪಕರು ಶಾಂತಿ ಪ್ರಕಾಶನ ಮಂಗಳೂರು) ಹಾಗೂ ನಿವೃತ್ತ ಉಪನ್ಯಾಸಕರಾದ ಶ್ರೀಮತಿ ಡಾ. ಮಧುಮತಿ ದೇಶಪಾಂಡೆ ಅವರು ವಿಚಾರ ಮಂಡನೆ ಮಾಡಲಿದ್ದಾರೆ.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ, ಮಾಜಿ ಸಂಸದರಾದ ಶ್ರೀ ಕೆ. ವಿರೂಪಾಕ್ಷಪ್ಪ, ಮಾಜಿ ಸಚಿವರಾದ ಶ್ರೀ ವೆಂಕಟರಾವ್ ನಾಡಗೌಡ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ, ಕೆ ಕರಿಯಪ್ಪ ಬಿಜೆಪಿ ಮುಖಂಡರು ಸಿಂಧನೂರು ,ಹನುಮಗೌಡ ಬೆಳಗುರ್ಕಿ ರೈತ ಮುಖಂಡರು ಸೇರಿದಂತೆ ಹಲವು ರಾಜಕೀಯ ಹಾಗೂ ಸಾಮಾಜಿಕ ಮುಖಂಡರು ಹಾಗೂ ಕನ್ನಡದ ಕಟ್ಟಾಳುಗಳು ಉಪಸ್ಥಿತರಿರಲಿದ್ದಾರೆ.

"ನಾವೆಲ್ಲರೂ ಒಂದೇ ಎಂಬ ಸದ್ಭಾವನೆಯೊಂದಿಗೆ ಈ ಸೌಹಾರ್ದ ಸಂಗಮದಲ್ಲಿ ಪಾಲ್ಗೊಳ್ಳೋಣ. ಕಾರ್ಯಕ್ರಮದಲ್ಲಿ ಬೇವು-ಬೆಲ್ಲ ಹಾಗೂ ಸುರುಕುರುಮ ಹಂಚುವ ಮೂಲಕ ಸಮರಸದ ಜೀವನಕ್ಕೆ ನಾಂದಿ ಹಾಡೋಣ" ಎಂದು ಆಯೋಜಕರಾದ ಡಾ॥ ಚನ್ನನಗೌಡ ಪೊಲೀಸ್ ಪಾಟೀಲ, ಹುಸೇನ್ ಸಾಬ್ ಮತ್ತು ಪಂಪಯ್ಯಸ್ವಾಮಿ ಸಾಲಿಮಠ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಹಳೆಯ ವಿದ್ಯಾರ್ಥಿಗಳಿಂದ ಹಣ್ಣು,ಹಂಪಲು ವಿತರಣೆ-ಬಡ ವಿದ್ಯಾರ್ಥಿಗಳ ಜೀವನಕ್ಕೆ ದಾರಿ ದೀಪವಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳು: ವೆಂಕಟೇಶ ಶಂಕ್ರಿ



ನೈಜ್ಯ ದೆಸೆ ನ್ಯೂಸ್

**ಕವಿತಾಳ: ಇಂದು ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಜಿಯವರ 119ನೇ ಜನ್ಮದಿನೋತ್ಸವದ ಪ್ರಯುಕ್ತ ಶ್ರೀ ಮಠದ ಹಳೆಯ ವಿದ್ಯಾರ್ಥಿಗಳಿಂದ ಪಟ್ಟಣದ ಸಮುದಾಯ ಆಸ್ಪತ್ರೆಯಲ್ಲಿ ರೋಗಿಗಳಿಗೆ**



**ಹಣ್ಣು, ಹಂಪಲು, ಹಾಲು ವಿತರಣೆ ಮಾಡು ಮೂಲಕ ಶ್ರೀಗಳ ಜನ್ಮದಿನೋತ್ಸವವನ್ನು ಅರ್ಥಗರ್ಭಿತವಾಗಿ ಆಚರಿಸಲಾಯಿತು.**

ಈ ಸಂದರ್ಭದಲ್ಲಿ ಶ್ರೀಮಠದ ಹಳೆಯ ವಿದಾರ್ಥಿ ವೆಂಕಟೇಶ ಶಂಕ್ರಿ ದೇವತಗಲ್ ಮಾತನಾಡಿ 'ನಮ್ಮಂತಹ ಎಷ್ಟೋ ವಿದ್ಯಾರ್ಥಿಗಳ ಜೀವನಕ್ಕೆ ದಾರಿ ದೀಪವಾಗಿ ತಮ್ಮ ಜೀವನವನ್ನೆ ನಮ್ಮಂತಹ ಬಡ ವಿದ್ಯಾರ್ಥಿಗಳಿಗಾಗಿ ಮುಡುಪಾಗಿಟ್ಟಿದ್ದ ಅಜ್ಜನವರ ಆಶೀರ್ವಾದ ಸದಾ ನಮ್ಮ ಮೇಲಿರಲಿ ಮತ್ತು ಅವರ ಆದರ್ಶಪ್ರಾಯವಾದ ಜೀವನವನ್ನು ನೋಡಿ ಅವರು ಹಾಕಿಕೊಟ್ಟಿರುವ ದಾರಿಯಲ್ಲಿ ನಾವುಗಳು ಸಾಗುವ ಪ್ರಯತ್ನವನ್ನು ಮಾಡಬೇಕು ನಮ್ಮ ಜೀವನದ ದಾರಿಯನ್ನು ತೊರಿಸಿಕೊಟ್ಟಿರುವ ಶ್ರೀಮಠ ಹಾಗೂ ಶ್ರೀಗಳನ್ನು ನಮ್ಮ ಜೀವನದಲ್ಲಿ ಎಂದು ಮರೆಯದೆ ಸಮಾಜದಲ್ಲಿ ಆದರ್ಶಪ್ರಾಯವಾದ ಜೀವನ ನಡೆಸುವ ಮೂಲಕ ಅವರಿಗೆ ಗೌರವವನ್ನು ತರೋಣ' ಎಂದರು. ಈ ಸಂದರ್ಭದಲ್ಲಿ ನಾಗರಾಜ ಸಾಹುಕಾರ್ ಕಲಂಗೇರಾ, ದೇವರಾಜ್ ದೇವತಗಲ್, ಹನುಮೇಶ, ಮೌನೇಶ್, ಮಹೇಶ್, ವಿನೋದ್, ಸಂತೋಷ್ ಕಲ್‌ಶೆಟ್ಟಿ,ಗೌಸ್, ಹುಸೇನಿ,ಅಜ್ಮೀರ್, ನಿರುಪಾದಿ, ರಾಘವೇಂದ್ರ ಸೇರಿದಂತೆ ಶ್ರೀ ಮಠದ ಹಳೆಯ ವಿದ್ಯಾರ್ಥಿಗಳು ವೈದ್ಯಾಧಿಕಾರಿ ಪ್ರವಿಣ ಮತ್ತಿತರರು ಉಪಸ್ಥಿತರಿದ್ದರು.

## ಸನ್ ರೈಸ್ ಕಾಲೇಜಿನಲ್ಲಿ ಶ್ರೀ ಶಿವಕುಮಾರ್ ಸ್ವಾಮೀಜಿ ಅವರ ಜನ್ಮ ದಿನದ ಪ್ರಯುಕ್ತ ಅನ್ನದಾಸೋಹ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾಮೆಡಿಕಲ್ ಕಾಲೇಜು, ಸಿಂಧನೂರಿನಲ್ಲಿ ಶತಮಾನ ಕಂಡ ನಡೆದಾಡುವ ದೇವರು, ಪರಮಪೂಜ್ಯ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮೀಜಿಗಳವರ ಜನ್ಮದಿನವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸ್ವಾಮೀಜಿಗಳವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಅನ್ನದಾಸೋಹ ಏರ್ಪಡಿಸುವ ಮೂಲಕ ಅವರ ಆದರ್ಶಗಳನ್ನು ಸ್ಮರಿಸಲಾಯಿತು.**

ಕಾರ್ಯಕ್ರಮದ ಆರಂಭದಲ್ಲಿ ಸ್ವಾಮೀಜಿಗಳವರ ತತ್ವಗಳು, ಸೇವಾಭಾವನೆ ಹಾಗೂ ಮಾನವೀಯ ಮೌಲ್ಯಗಳನ್ನು ಸ್ಮರಿಸಿ ಎಲ್ಲರೂ ಮೌನ ಪ್ರಾರ್ಥನೆ ಸಲ್ಲಿಸಿದರು. ನಂತರ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಸೇರಿ ಭಕ್ತಿ ಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ಇನ್ನಷ್ಟು ಗೌರವವನ್ನು ತಂದರು.ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಇರ್ಫಾನ್ ಕೆ ಅವರು ಮಾತನಾಡಿ, "ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳು ಕೇವಲ ಧಾರ್ಮಿಕ ಗುರುಗಳಷ್ಟೇ ಅಲ್ಲ, ಅವರು ಮಾನವೀಯತೆಯ ಪ್ರತಿರೂಪವಾಗಿದ್ದರು.

ಅವರ ಜೀವನವೇ ಒಂದು ಪಾಠಪುಸ್ತಕ. ಶಿಕ್ಷಣದ ಮಹತ್ವವನ್ನು ಅರಿತು ಲಕ್ಷಾಂತರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಅನ್ನದಾಸೋಹ ನೀಡಿದ ಮಹಾನ್ ವ್ಯಕ್ತಿತ್ವ ಅವರದು. ಇಂದಿನ ಯುವಜನತೆ ಅವರ ಜೀವನದಿಂದ ಸ್ಫೂರ್ತಿ ಪಡೆದು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು ಹಾಗೂ ಸ್ವಾಮೀಜಿಗಳವರು ಜಾತಿ, ಧರ್ಮ



ಬೇಧವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವ ಗುಣವನ್ನು ಬೆಳೆಸಿದರು. ಅವರ ಜೀವನ ನಮಗೆ ಸಹಿಷ್ಣುತೆ, ಶಿಸ್ತು ಮತ್ತು ಸೇವಾಭಾವನೆ ಕಲಿಸುತ್ತದೆ" ಎಂದು ಅಭಿಪ್ರಾಯಪಟ್ಟರು. ಹಾಗು ಕಾರ್ಯಕ್ರಮದಲ್ಲಿ ಪ್ಯಾರಾ ಮೆಡಿಕಲ್ ಕಾಲೇಜು ಪ್ರಾಚಾರ್ಯ ಚಕ್ರವರ್ತಿ ಮಾತನಾಡಿ ಶಿಕ್ಷಣವೆಂಬುದು




ಕೇವಲ ಉದ್ಯೋಗಕ್ಕಾಗಿ ಅಲ್ಲ, ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಅಗತ್ಯವಾದ ಸಾಧನ ಎಂಬುದನ್ನು ಸ್ವಾಮೀಜಿಗಳು ತಮ್ಮ ಜೀವನದ ಮೂಲಕ ತೋರಿಸಿದ್ದಾರೆ. ವಿದ್ಯಾರ್ಥಿಗಳು ಕೇವಲ ಪಾಠಪುಸ್ತಕಗಳಿಗೆ ಸೀಮಿತವಾಗದೆ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು" ಎಂದು ಹೇಳಿದರು.ಹಾಗೂ ಉಪನ್ಯಾಸಕ ಡಾ.ರಾಜೇಶ್ ಮಾತನಾಡಿ ಸ್ವಾಮೀಜಿಗಳವರ ಜೀವನ ಚರಿತ್ರೆಯನ್ನು ವಿವರವಾಗಿ ವಿವರಿಸಿ, "ಅವರ ಸರಳ ಜೀವನ, ಶಿಸ್ತಿನ ನಡೆ ಹಾಗೂ ವಿದ್ಯಾರ್ಥಿಗಳ ಮೇಲಿನ ಅಪಾರ ಕಾಳಜಿ ಎಲ್ಲರಿಗೂ ಮಾದರಿ.

ವಿದ್ಯಾರ್ಥಿಗಳು ಅವರಂತೆಯೇ ಪರಿಶ್ರಮ, ನಿಷ್ಠೆ ಹಾಗೂ ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕು "ನಾನು ಸಿದ್ದಗಂಗಾ ಮಠದಲ್ಲಿ ಬಿಎಸ್ಸಿ ಪದವಿ ಪಡೆದು ಸ್ವಾಮೀಜಿಗಳನ್ನು ಸಮೀಪದಿಂದ ನೋಡುವ ಭಾಗ್ಯ ಪಡೆದಿದ್ದೇನೆ. ಅವರು ವಿದ್ಯಾರ್ಥಿಗಳೊಂದಿಗೆ ಅತ್ಯಂತ ಆತ್ಮೀಯವಾಗಿ ವರ್ತಿಸುತ್ತಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ದಾನ ಮಾಡಿದ ಮಹಾನ್ ವ್ಯಕ್ತಿ ಅವರು" ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.ಇದೇ ಸಂದರ್ಭದಲ್ಲಿ ಇತರ ಉಪನ್ಯಾಸಕರಾದ ಅಶು ಪಾಷಾ, ಚೈತ್ರ, ದಿಲೀಪ್, ಹರ್ಷಿತಾ, ಸಂತೋಷಿ, ವೀರೇಶ್ವರಿ, ಸುಧಾ, ವೀರೇಶ್, ನಾಗರತ್ನ, ಫರೀದಾ, ಪರ್ವೀನ್, ಪವಿತ್ರ, ವೀರಭದ್ರಯ್ಯ ಸ್ವಾಮಿ, ಮನೋಹರ ಮೈಲಾಪುರ್, ಪುಟ್ಟರಾಜು ಅವರು ಕೂಡ ಸ್ವಾಮೀಜಿಗಳವರ ಆದರ್ಶಗಳನ್ನು ಸ್ಮರಿಸಿ ಮಾತನಾಡಿದರು.ವಿದ್ಯಾರ್ಥಿಗಳು ತಮ್ಮ



ಅಭಿಪ್ರಾಯಗಳನ್ನು ಹಂಚಿಕೊಂಡು, "ಸ್ವಾಮೀಜಿಗಳ ಜೀವನ ನಮಗೆ ಸತ್ಯನಿಷ್ಠೆ, ಪರಿಶ್ರಮ ಮತ್ತು ಸಮಾಜಸೇವೆ ಮಾಡುವ ಪ್ರೇರಣೆ ನೀಡುತ್ತದೆ. ನಾವು ಅವರ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತೇವೆ" ಎಂದು ಹೇಳಿದರು.

## ನೇಮಕಾತಿ ಪ್ರಕಟಣೆ

ಭಾರತೀಯ ಸೇನೆಯ ಅಗ್ನಿವೀರ್ ನೇಮಕಾತಿ 2026 ಹುದ್ದೆಯ ವಿವರಗಳು ಭಾರತೀಯ ಸೇನೆಯ ಅಗ್ನಿವೀರ್ ಹುದ್ದೆಯ 2026 ರ ಅಧಿಕೃತ ಅಧಿಸೂಚನೆಯನ್ನು ಬಿಡುಗಡೆ ಮಾಡಲಾಗಿದ್ದು, GD, ಟ್ರೇಡ್ಸ್‌ಮನ್, ತಾಂತ್ರಿಕ, ಸೋಲ್ಜರ್ ಫಾರ್ಮಾ ಮತ್ತು ಇತರ ಹುದ್ದೆಗಳು ಸೇ–ರಿದಂತೆ ವಿವಿಧ ಹುದ್ದೆಗಳಲ್ಲಿ 25,000+ (ನಿರೀಕ್ಷಿತ) ಹುದ್ದೆಗಳನ್ನು ಪ್ರಕಟಿಸಲಾಗಿದೆ. ಹುದ್ದೆಯ ಹೆಸರು ಅಗ್ನಿವೀರ್ (ಜಿಡಿ, ಟ್ರೇಡ್ಸ್‌ಮನ್, ಕ್ಲರ್ಕ್ ಮತ್ತು ಇತರ ಹುದ್ದೆಗಳು) ಹುದ್ದೆಗಳ ಸಂಖ್ಯೆ 25000+ (ನಿರೀಕ್ಷಿತ) ಸಂಬಳ ರೂ. 30,000/– (ಮೊದಲ ವರ್ಷ) ರೂ. 33,000/– (ಎರಡನೇ ವರ್ಷ) ರೂ. 36,500/– (ಮೂರನೇ ವರ್ಷ) ರೂ. 40,000/– (4ನೇ ವರ್ಷ) ಅರ್ಹತೆ 12ನೇ, 10ನೇ, 8ನೇ ವಯಸ್ಸಿನ ಮಿತಿ 17.5 ರಿಂದ 21 ವರ್ಷಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 10–04–2026 ಅಧಿಕೃತ ವೆಬ್‌ಸೈಟ್ https://www.joinindianarmy.nic.in

## ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ರಾಯಚೂರು ಜಿಲ್ಲಾ ಪ್ರವಾಸ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಭಾರತ ಸರ್ಕಾರದ ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರು 2026ರ ಏಪ್ರಿಲ್ 4ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮ ಕೈಗೊಂಡಿದ್ದಾರೆ.**



ಅವರು ಏಪ್ರಿಲ್ 4ರ ಬೆಳಿಗ್ಗೆ 9ಗಂಟೆಗೆ ಬೆಂಗಳೂ–ರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕ್ಯಾಪ್ಟರ್ ಮೂಲಕ ನಿರ್ಗಮಿಸಿ, ಬೆಳಿಗ್ಗೆ 11ಗಂಟೆಗೆ ರಾಯಚೂರು ಜಿಲ್ಲೆಯ ಸಿಂಧನೂರಿನ ಹೆಲಿಪ್ಯಾಡ್ ಆಗಮಿಸುವರು. ಬಳಿಕ 11.30ಕ್ಕೆ ಸಿಂಧನೂರಿನ ಶ್ರೀಕೃಷ್ಣದೇವರಾಯ ಸೈನಿಕ ಶಾಲೆಗೆ ರಸ್ತೆ ಮೂಲಕ ಪ್ರಯಾಣಿಸಿ, ಶ್ರೀಕೃಷ್ಣದೇವರಾಯ ಸೈನಿಕ ಶಾಲೆಯ ಅದ್ದೂರಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2ಗಂಟೆಗೆ ಸಿಂಧನೂರಿನ ಶ್ರೀಕೃಷ್ಣದೇವರಾಯ ಸೈನಿಕ ಶಾಲೆಯಿಂದ ರಸ್ತೆ ಮೂಲಕ ಸಿಂಧನೂರಿನ ಹೆಲಿಪ್ಯಾಡ್‌ಗೆ ಆಗಮಿಸಿ, 2.30ಗಂಟೆಗೆ ಹೆಲಿಕ್ಯಾಪ್ಟರ್ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳಾದ ಅಮರೇಶ ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಮನ ಮೂರ್ತಿ ಭವ್ಯ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ರಾಮ ನವಮಿ ಉತ್ಸವ ಸಮಿತಿ ನೇತೃತ್ವದಲ್ಲಿ ಸೋಮವಾರ ಸಂಜೆ ಶ್ರೀ ರಾಮನ ಪ್ರತಿಮೆಯ ಭವ್ಯ ಶೋಭಾಯಾತ್ರೆ ನಡೆಯಿತು. ಜೈ ಶ್ರೀರಾಮ...ಜೈ ಶ್ರೀರಾಮ ಎಂಬ ಭಕ್ತರ ಘೋಷಣೆಗಳು ಮುಗಿಲುಮುಟ್ಟಿದವು. ಪರಮ ಪೂಜ್ಯರಾದ ಸಿದ್ದಲಿಂಗ ದೇವರು, ಗುರುಲಿಂಗ ಶ್ರೀಗಳು, ಸೋಮಲಿಂಗ ಶ್ರೀಗಳು ಹಾಗೂ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಶ್ರೀರಾಮ ಮೂರ್ತಿ ಮೆರವಣಿಗೆಗೆ ಚಾಲನೆ ನೀಡಿದರು.**



ಪಟ್ಟಣದ ಮಹಾರಾಣಾ ಪ್ರತಾಪ್ ಸಿಂಹ ವೃತ್ತದಿಂದ ಆರಂಭವಾದ ಭವ್ಯ ಶೋಭಾ ಯಾತ್ರೆಯು ಛತ್ರಪತಿ ಶಿವಾಜಿ ವೃತ್ತ, ಕತ್ರಿ ಬಜಾರ್ ಮಾರ್ಗವಾಗಿ ಶ್ರೀ ಅಂಬಾಭವಾನಿ ಮಂದಿರದ ರಸ್ತೆ, ಡಾ.ಬಿ ಆರ್ ಅಂಬೇಡ್ಕರ್ ವೃತ್ತದ ಮೂಲಕ ಶ್ರೀ ಬಸವೇಶ್ವರ ವೃತ್ತಕ್ಕೆ ತಲುಪಿ ಮುಕ್ತಾಯವಾಯಿತು. ಶೋಭಾ ಯಾತ್ರೆಯಲ್ಲಿ ಭಾಗವಹಿಸಿದ ಸಾವಿರಾರು ರಾಮ ಭಕ್ತರು ಜೈ ಶ್ರೀರಾಮ ಎಂದು ಭಕ್ತಿ ಭಾವದ ಜಯಘೋಷ ಮೊಳಗಿಸುತ್ತ ಭಗವಾ ಧ್ವಜ ಹಿಡಿದು ಶೋಭಾಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಪುರಸಭೆ ಮಾಜಿ ಅಧ್ಯಕ್ಷ ದಶರಥಸಿಂಗ್ ಮನಗೂಳಿ,ಜಿಪಂ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್.ಎಸ್.ಪಾಟೀಲ (ಕೂಚಬಾಳ) ಶ್ರೀರಾಮ ನವಮಿ ಉತ್ಸವ ಸಮಿತಿ ಅಧ್ಯಕ್ಷ ಅಮೀತಸಿಂಗ್ ಮನಗೂಳಿ, ಉಪಾಧ್ಯಕ್ಷ ಸೂರಜ ಹಜೇರಿ, ಪುರಸಭೆ ಮಾಜಿ ಸದಸ್ಯ ಸುರೇಶ್ ಹಜೇರಿ, ಸಾಮಾಜಿಕ ಕಾರ್ಯಕರ್ತ ಸಿರಸಕುಮಾರ ಹಜೇರಿ, ಶ್ರೀರಾಮ ಉತ್ಸವ ಸಮಿತಿಯ ಪದಾಧಿಕಾರಿಗಳಾದ ಗೋವಿಂದಸಿಂಗ್ ಹಜೇರಿ, ಸುಧೀರ ತಿವಾರಿ,ರಾಘು ಹಜೇರಿ, ವಿಠ್ಠಲಸಿಂಗ್ ಹಜೇರಿ, ನಿತಿನ್ ವಿಜಾಪುರ,ರಾಜು ಹಜೇರಿ, ಚಂದ್ರು ರಜಪೂತ ಹಾಗೂ ಸರ್ವ ಸಮಾಜದ ಗಣ್ಯರು ಹಾಗೂ ಯುವಕರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದಲ್ಲಿ ಗರುಡ ವಾಹನ ಸೇವೆ ಅದ್ದೂರಿ

ನೈಜ್ಯ ದೆಸೆ ನ್ಯೂಸ್


**ದೇವದುರ್ಗ: ತಾಲೂಕಿನ ಜಾಲಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದಲ್ಲಿ ನಡೆಯುತ್ತಿರುವ ರಥೋತ್ಸವದ ಅಂಗವಾಗಿ ತ್ರಯೋದಶಿ ಗರುಡ ವಾಹನ ಸೇವೆ ಇಂದು ಭಕ್ತಿ ಭಾವದಿಂದ ಹಾಗೂ ಅದ್ದೂರಿಯಾಗಿ ಜರುಗಿತು.**

ಸಾವಿರಾರು ಭಕ್ತರು ಪಾಲ್ಗೊಂಡ ಈ ಕಾರ್ಯಕ್ರಮದಲ್ಲಿ, ರಾತ್ರಿಯ ವೇಳೆ ಭಕ್ತರು ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ಬೆಳಗ್ಗೆ 5 ಗಂಟೆಗೆ ದೇವಾಲಯದ ಪೂಜಾರಿಗಳಾದ ಸುರೇಶ್ ಪೂಜಾರಿ, ಗಂಗಾಧರ್ ಪೂಜಾರಿ, ಚಂದ್ರಹಾಸ್ ಪೂಜಾರಿ, ವೆಂಕಟೇಶ್ ಪೂಜಾರಿ ಅವರು ವರದಾಚಾರಿ ಅವರ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮೆರವಣಿಗೆ ಮೂಲಕ ಉಚ್ಚಯ್ಯ ರಥದಲ್ಲಿ ಶ್ರೀ ದೇವರನ್ನು ಪ್ರತಿಷ್ಠಾಪಿಸಿದರು. ಈ ಸಂದರ್ಭದಲ್ಲಿ ಊರಿನ ವತಂದಾರರು ಹಾಗೂ ರಾಜವಂಶಸ್ಥರಾದ ರಾಜ ರಾಮ್ ಭದ್ರಪ್ಪ ನಾಯಕ್, ರಾಜ ವಾಸುದೇವ ನಾಯಕ್, ಹಾಗೂ ರಂಗಪ್ಪ ದೊರೆ ಊರಿನ ಎಲ್ಲಾ ವತಂದಾರರು ಸೇರಿದಂತೆ ಅನೇಕ ಗಣ್ಯರು ಹಾಗೂ ಭಕ್ತರು ಹಾಜರಿದ್ದರು.




ಪ್ರತಿವರ್ಷದಂತೆ ಈ ವರ್ಷವೂ ಗರುಡ ವಾಹನ ಸೇವೆಗೆ ಹಾರ–ತುರಾಯಿ ಸಮರ್ಪಣೆ ಮಾಡಿದ್ದು, ಗೂಡ್ ಸಾಬ್ ದಂಡೋತಿ, ಯಾಸಿನ್ ಸಾಬ್ ಮುಲ್ಲಾ, ಯೂಸುಫ್ ಸಾಬ್ ಪೂಜಾರಿ, ಇಬ್ರಾಹಿಂ ಪೂಜಾರಿ ಅವರು ಭಕ್ತಿಭಾವದಿಂದ ಅರ್ಪಿಸಿದರು. ಬೆಳಗಿನ ಕಾರ್ಯಕ್ರಮ ಜರುಗಿತು ಬೆಳಗ್ಗೆ 8:30 ಗಂಟೆಗೆ, ಊರಿನ ವತಂದಾರರು, ರಾಜವಂಶಸ್ಥರು, ದೇಸಾಯಿ, ಕುಲಕರಣಿ, ಪೊಲೀಸ್ ಪಾಟೀಲ್, ಮಾಲಿಪಾಟೀಲ್ ಹಾಗೂ ಗ್ರಾಮಸ್ಥರು ಸೇರಿ ಸಕ್ಕರೆ ಸಮೇತ ಪೂಜೆ ನೆರವೇರಿಸಿದರು ಉಚ್ಚಯ್ಯ ರಥ–'ವನ್ನು ಎಳೆಯುವ ಕಾರ್ಯಕ್ರಮ ನಡೆಯಿತು.

ಈ ರಥವನ್ನು ಸಂಜೀವ್ ಮೂರ್ತಿ ಗುಡಿವರೆಗೆ ಎಳೆದು, ಅಲ್ಲಿ ಪೂಜೆ ಸಲ್ಲಿಸಿ ಶ್ರೀ ಲಕ್ಷ್ಮಿ ರಂಗನಾಥ ಗುಡಿಯ ಪೂಜಾ–ರಿಗಳಾದ ಸುರೇಶ್ ಪೂಜಾರಿ, ಗಂಗಾಧರ್ ಪೂಜಾರಿ ಹಾಗೂ ವರದಚಾರ್ಯರು ಪೂಜೆ ನೆರವೇರಿಸಿದರು ನಂತರ ಮತ್ತೆ ತೇರಿನ ಹತ್ತಿರ ನಿಲ್ಲಿಸಲಾಯಿತು. ಈ ಸಂದರ್ಭದಲ್ಲಿ ಊರಿನ ವತಂದಾರರಾದ ರಾಜವಂಶಸ್ಥರು, ದೊರೆಗಳು ದೇಸಾಯಿಯವರು, ಕುಲಕರಣಿಯವರು, ಪೊಲೀಸ್ ಪಾಟೀಲ್, ಮಾಲಿಪಾಟೀಲ್ ಹಾಗೂ ಭಕ್ತಾದಿಗಳು



ಗೋವಿಂದ ಸಮಿತಿ ಮಾಲದಾರಿಗಳು ಎಲ್ಲಾ ಕಾರ್ಯಕ್ರಮ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ತಹಸಿಲ್ದಾರರು, ಕಂದಾಯ ನಿರೀಕ್ಷಕರು ಹಾಗೂ ಕಂದಾಯ ಇಲಾಖೆ ಸಿಬ್ಬಂದಿಯವರು ಹಾಜರಾಗಿದ್ದರು.

# ಸ್ಟೇಟಸ್‌ನಲ್ಲಿ ನೀನಿಲ್ಲ




**ಅಂತರ್ಜಾಲ ಯುಗದಲ್ಲಿ ಮೊಬೈಲ್ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಇಂದಿನ ವಿಶ್ವದ ಜನಸಂಖ್ಯೆಯಲ್ಲಿ ಸುಮಾರು 36%–38% ರಷ್ಟು, ಅಂದರೆ ಸುಮಾರು 3 ಬಿಲಿಯನ್ ಜನರು ವಾಟ್ಸ್ ಆಯಪ್ ಬಳಸುತ್ತಿದ್ದಾರೆ. ಈ ಅಪಾರ ಬಳಕೆಯಲ್ಲಿ ಗಮನಸೆಳೆಯುವ ಪ್ರಮುಖ ಅಂಶವೆಂದರೆ "ಸ್ಟೇಟಸ್".**

**"ಸ್ಟೇಟಸ್" ಎಂದರೆ ವ್ಯಕ್ತಿಯ ಪ್ರಸ್ತುತ ಸ್ಥಿತಿ, ಮನಸ್ಥಿತಿ ಅಥವಾ ಪರಿಸ್ಥಿತಿಯನ್ನು ಸೂಚಿಸುವ ಒಂದು ಮಾರ್ಗ. ವಾಟ್ಸ್ ಆ?ಯಪ್ ನಲ್ಲಿ ಫೋಟೋ, ವಿಡಿಯೋ ಅಥವಾ ಬರಹದ ಮೂಲಕ ವ್ಯಕ್ತಿಗಳು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ.**

ಆದರೆ, ಇಂದಿನ ಯುವಜನತೆ ಸ್ಟೇಟಸ್ ಅನ್ನು ಅನಾವಶ್ಯಕವಾಗಿ ಬಳಸುತ್ತಿರುವುದು ಒಂದು ಚಿಂತಾಜನಕ ವಿಷಯವಾಗಿದೆ. ಕೆಲವರು ತಮ್ಮ ಜೀವನದ ಮೌಲ್ಯಗಳನ್ನು ಮರೆತು, ಸ್ಟೇಟಸ್‌ಗಳಲ್ಲೇ ಬದುಕುತ್ತಿರುವಂತಾಗಿದೆ.

ಸ್ಟೇಟಸ್ ಎಂಬುದು ಕೇವಲ ಗಮನ ಸೆಳೆಯುವ ಸಾಧನವಲ್ಲ; ಅದು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಕನ್ನಡಿ. ಆದ್ದ–ರಿಂದ, ನಾವು ಹಂಚಿಕೊಳ್ಳುವ ಸ್ಟೇಟಸ್ ನಮ್ಮ ವ್ಯಕ್ತಿತ್ವ, ಚಿಂತನೆ ಮತ್ತು ಸಂಸ್ಕಾರವನ್ನು ತೋ–ರಿಸಬೇಕು.

ಒಳ್ಳೆಯ ಸ್ಟೇಟಸ್ ಹೇಗಿರಬೇಕು?

* ನಮ್ಮ ಜೀವನಕ್ಕೆ ಸಂಬಂಧಿಸಿದಿರಬೇಕು
* ತಮ್ಮ ಸಾಧನೆ ತೋರಿಸಬೇಕು.
* ಮನರಂಜನೆಯಲ್ಲಿ ಮಾಹಿತಿ ಇರಬೇಕು.
* ಇತರರಿಗೆ ಸ್ಫೂರ್ತಿ ತುಂಬುವಹಾಗಿರಬೇಕು.
* ಚಿಂತನೆ ಸುವಿಚಾರಗಳಿರಬೇಕು.
* ಸಂಸ್ಕಾರ ಸಂಸ್ಕೃತಿ ಒಳಗೊಂಡಿರಬೇಕು.
* ಮತ್ತೊಬ್ಬರನ್ನು ಸಮಾದನ ಪಡಿಸುವ ಹಾಗಿರಬೇಕು.
* ಸರಳ ಮತ್ತು ಸ್ಪಷ್ಟವಾಗಿರಬೇಕು.
* ಸಕಾರಾತ್ಮಕ ಪರಿಣಾಮ ಬೀರುವಹಾಗಿರಬೇಕು.
* ವ್ಯಕ್ತಿತ್ವ ತೋರುತ್ತದೆ.
* ಅರ್ಥಪೂರ್ಣವಾಗಿರಲಿ
* ವೈಯಕ್ತಿಕ ವಿಷಯ ಹೊರತಾಗಿರಲಿ
* ಪ್ರೇರಣದಾಯಕವಾಗಿರಲಿ
* ನೋವು ಅಥವಾ ದುಃಖ ತೋರಿಸುವ ಅವಶ್ಯಕತೆ ಇಲ್ಲ.
* ಯಾರನ್ನು ತೆಗಳಿಕೆ ಅವಶ್ಯಕತೆ ಇಲ್ಲ.
* ಸಮಾಜಿಕ ಸಂದೇಶ ಕೊಡಿ.

ಕೊನೆಯಲ್ಲಿ, "ಸ್ಟೇಟಸ್‌ನಲ್ಲಿ ನೀನಿಲ್ಲ" ಎಂಬ ಅರ್ಥವೇನೆಂದರೆ, ನಾವು ನಮ್ಮ ನಿಜವಾದ ಬದುಕನ್ನು ಮರೆತು ಕೇವಲ ಸ್ಟೇಟಸ್‌ಗಳಲ್ಲಿ ಬದುಕಬಾರದು. ನಿಜವಾದ ಜೀವನವೇ ಮುಖ್ಯ, ಸ್ಟೇಟಸ್ ಅಲ್ಲ. ಸ್ಟೇಟಸ್ ನಮ್ಮ ಜೀವನದ ಒಂದು ಭಾಗ ಮಾತ್ರ, ಜೀವನವೇ ಅಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು.

MOOD OF ಈ ಸ್ಟೇಟಸ್ ? ಅಗತ್ಯವೇ?

ಇತ್ತೀಚಿನ ದಿನಮಾನದಲ್ಲಿ ಯುವಜನರಲ್ಲಿ ``MOOD OFF" ಎಂಬ ಸ್ಟೇಟಸ್ ಹಾಕುವುದು ಒಂದು ಸಾಮಾನ್ಯ ಪ್ರವೃತ್ತಿಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ನೋಡಿದರೆ, ಹಲವರ ಸ್ಟೇಟಸ್‌ಗಳಲ್ಲಿ ದುಃಖ, ಬೇಸರ, ನಿರಾಶೆ ತುಂಬಿಕೊಂಡಿರುವುದು ಕಾಣಿಸುತ್ತದೆ. ಆದರೆ, ಒಂದು ಕ್ಷಣ ಯೋಚಿಸಿದರೆ ಇದರಿಂದ ನಮಗೆ ಏನು ಲಾಭ?

ನಿಜವಾಗಿ ನೋಡಿದರೆ, ನಮ್ಮ ಮೂಡ್ "ಆನ್" ಅಥವಾ "ಆಫ್" ಮಾಡುವ ಅಧಿಕಾರ ನಮ್ಮ ಕೈಯಲ್ಲೇ ಇದೆ. ಅದನ್ನು ಹೊರಗಿನ ಜಗತ್ತಿಗೆ ತೋರಿಸುವುದ–ರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಬದಲಿಗೆ, ಕೆಲವರು ನಮ್ಮ ನೋವನ್ನು ಅರ್ಥಮಾಡಿಕೊಳ್ಳಬಹುದು, ಆದರೆ ಇನ್ನೂ ಕೆಲವರು ಅದನ್ನು ನೋಡಿ ಒಳಗೆ ಒಳಗೆ ಸಂತೋಷಪಡುವ ಸಾಧ್ಯತೆ ಕೂಡ ಇದೆ. ಆದ್ದರಿಂದ, ನಮ್ಮ ನಕಾರಾತ್ಮಕ ಭಾವನೆಗಳನ್ನು ಎಲ್ಲರ ಮುಂದೆ ಪ್ರದರ್ಶಿಸುವುದು ಅಗತ್ಯವಿಲ್ಲ.

ಮನಸ್ಸಿಗೆ ಬೇಸರವಾದಾಗ, ಅದನ್ನು ಸ್ಟೇಟಸ್‌ನಲ್ಲಿ ಹಾಕುವುದಕ್ಕಿಂತ, ನಮ್ಮ ಆತ್ಮೀಯರೊಂದಿಗೆ ಹಂಚಿಕೊಳ್ಳುವುದು ಉತ್ತಮ. ಯಾರ ಬಳಿ ಹೇಳಿಕೊಂಡರೆ ನಮಗೆ ನೆಮ್ಮದಿ, ಸಮಾಧಾನ ಮತ್ತು ನಿರಾಳತೆ ದೊರೆಯುತ್ತದೆ ಅವರ ಜೊತೆ ಮಾತಾಡುವುದು ಹೆಚ್ಚು ಫಲಪ್ರದ.

ನಮ್ಮ ಮೂಡ್ ಅನ್ನು "ಆನ್" ಮಾಡುವವರು ಯಾರು?

* ಪೋಷಕರು ನಮ್ಮ ನೋವನ್ನು ಹೃದಯದಿಂದ ಅರ್ಥಮಾಡಿಕೊಳ್ಳುವವರು
* ದಾಯಾದಿಗಳು ನಮ್ಮ ಜೊತೆ ಸದಾ ನಿಂತಿರುವವರು
* ಆತ್ಮೀಯ ಗೆಳೆಯ/ಗೆಳತಿ ನಮ್ಮ ಮನಸ್ಸಿಗೆ ಹತ್ತಿರವಾದವರು
* ಮಡದಿ/ಪತಿ ? ನಮ್ಮ ಜೀವನದ ಸಹಯಾತ್ರಿಗಳು

ಈ ಸಂಬಂಧಗಳು ನಮ್ಮ ಜೀವನದ ನಿಜವಾದ ಶಕ್ತಿ. ಇವರು ನಮ್ಮನ್ನು ಮತ್ತೆ ನಗಿಸುವ ಸಾಮರ್ಥ್ಯ ಹೊಂದಿದ್ದಾರೆ. ಒಂದು ಸ್ಟೇಟಸ್ ಅದನ್ನು ಮಾಡಲಾರದು.

ಕೊನೆಯಲ್ಲಿ, ಜೀವನದಲ್ಲಿ ಪ್ರತಿಯೊಂದು ಭಾವನೆ ಸಹಜ. ಆದರೆ, ಅದನ್ನು ಹೇಗೆ ನಿರ್ವಹಿಸುತ್ತೇವೆ ಎಂಬುದೇ ಮುಖ್ಯ. ``MOOD OFF" ಅನ್ನು ಜಗತ್ತಿಗೆ ತೋ–ರಿಸುವುದಕ್ಕಿಂತ, ``MOOD ON" ಆಗುವ ಮಾರ್ಗವನ್ನು ಹುಡುಕುವುದು ಉತ್ತಮ. ನಮ್ಮ ಜೀವನ ಸ್ಟೇಟಸ್ ಅಲ್ಲ ಅದು ಒಂದು ಅಮೂಲ್ಯ ಅವಕಾಶ. ಅದನ್ನು ಸಕಾರಾತ್ಮಕವಾಗಿ ಬದುಕೋಣ.

* MOOD OFF ಅಲ್ಲ LIFE ON ಮಾಡಿಕೊಳ್ಳೋಣ.



ಮಹಿಬೂಬ್ ಮದ್ಲಾಪುರ
ಸಂಪನ್ಮೂಲ ವ್ಯಕ್ತಿಗಳು ಮಾನ್ವಿ.

## ಪವಿತ್ರ ವಾರದ ಸಂದೇಶ: ಪ್ರೀತಿ, ತ್ಯಾಗ, ಕ್ಷಮೆ ಮತ್ತು ಪುನರುತ್ಥಾನ ಗುಡ್ ಫ್ರೈಡೆ

ಮಾನವ ಜೀವನದಲ್ಲಿ ಪ್ರೀತಿ, ಕ್ಷಮೆ ಮತ್ತು ತ್ಯಾಗವು ಅತ್ಯಂತ ಮಹತ್ವದ ಮೌಲ್ಯಗಳಾಗಿವೆ. ಆದರೂ, ನಮ್ಮ ದೈನಂದಿನ ಬದುಕಿನಲ್ಲಿ ನಾವು ಅನೇಕ ವಿರೋಧಾಭಾಸಗಳನ್ನು ಕಾಣುತ್ತೇವೆ. ಕೆಲವರು ವಿನಯದಿಂದ, ಭಕ್ತಿಯಿಂದ ಬದುಕುತ್ತಿದ್ದರೆ, ಇನ್ನೂ ಕೆಲವರು ದ್ವೇಷ, ಪ್ರತೀಕಾರ ಮತ್ತು ಅಹಂಕಾರದಿಂದ ನಡೆದುಕೊಳ್ಳುತ್ತಾರೆ.

ನಾವು ಈ ಜಗತ್ತಿನಲ್ಲಿ ನೋಡುತ್ತಿರುವುದು ಒಳ್ಳೆಯದು ಮತ್ತು ಕೆಟ್ಟದ ನಡುವಿನ ಸ್ಪಷ್ಟ ಭಿನ್ನತೆ. ಕೆಲವರು ಸೇವೆ ಮಾಡುವ ಮೂಲಕ ಮಹತ್ವವನ್ನು ಪಡೆಯಲು ಪ್ರಯತ್ನಿಸುತ್ತಾರೆ, ಆದರೆ ಇನ್ನೂ ಕೆಲವರು ಪ್ರತೀಕಾರದ ಮೂಲಕ ತೃಪ್ತಿಯನ್ನು ಹುಡುಕುತ್ತಾರೆ.

ಈ ಮಾನವೀಯ ಸ್ವಭಾವಗಳ ನಡುವೆ, ಏಸುಕ್ರಿಸ್ತರು ಅವರ ಜೀವನವು ಸಂಪೂರ್ಣವಾಗಿ ವಿಭಿನ್ನವಾದ ದಾರಿಯನ್ನು ತೋರಿಸುತ್ತದೆ ಪ್ರೀತಿ, ವಿನಯ, ತ್ಯಾಗ ಮತ್ತು ಕ್ಷಮೆಯ ದಾರಿ.

ಮಾನವ ಸ್ವಭಾವ ಮತ್ತು ಕ್ರಿಸ್ತನ ವಿಭಿನ್ನ ಮಾರ್ಗ

"ನಾ ಕಂಡಿರುವೆ ಇಹದೊಳ್
ಗುರುಗಳ ಪಾದ ತೊಳೆಯುವ ಶಿಷ್ಯರನ್ನು.
ನಾ ಕಂಡಿರುವೆ ಇಹದೊಳ್
ಕೇಡನ್ನು ಬಯಸಿದವರಿಗೆ ಪ್ರತಿಯಾಗಿ
ಕೇಡನ್ನೇ ಬಯಸುವವರನ್ನು.
ನಾ ಕಂಡಿರುವೆ ತಮ್ಮನ್ನು
ಪರಿಹಾಸ ಮಾಡಿದವರ ಮೇಲೆ
ಪ್ರತೀಕಾರ ತೀರಿಸಲು ಕಾಯುತ್ತಿರುವ
ಜನರನ್ನು.
ಆದರೆ ಏಸುಕ್ರಿಸ್ತರು
ತಾನು ಗುರುವಾಗಿದ್ದರೂ,
ತನ್ನ ಶಿಷ್ಯರ ಪಾದಗಳನ್ನು ತೊಳೆಯುವ
ವಿನಯವನ್ನು ತೋರಿದನು.
ತನಗೆ ಕೇಡು ಬಯಸಿದವ–
ರಿಗಾಗಿ "ತಂದೆಯೇ, ಇವರೇನು
ಮಾಡುತ್ತಿದ್ದಾರೆಂದು ಇವರಿಗೆ ಅರಿವಿಲ್ಲ;
ಇವರನ್ನು ಕ್ಷಮಿಸು" ಎಂದು
ಪ್ರಾರ್ಥಿಸಿದನು.
ತನಗೆ ಪರಿಹಾಸ ಮಾಡಿದವರ ಮೇಲೆ
ಪ್ರತಿರೋಧ ತೋರದೆ,
ಕಲ್ವಾರಿಯ ಪಯಣದತ್ತ ಸಾಗಿದನು ?
ಮನುಕುಲದ ಮೇಲಿನ ಅಪಾರ ಪ್ರೀತಿಗಾಗಿ,
ಮನುಕುಲದ ರಕ್ಷಣೆಯಿಗಾಗಿ.
ಮತ್ತೊಮ್ಮೆ ಅವನ ಪ್ರಾರ್ಥನೆ:
"ತಂದೆಯೇ, ಇವರೇನು
ಮಾಡುತ್ತಿದ್ದಾರೆಂದು ಇವರಿಗೆ ಅರಿವಿಲ್ಲ;
ಇವರನ್ನು ಕ್ಷಮಿಸು."

ಪವಿತ್ರ ಗುರುವಾರ : ಸೇವೆಯಲ್ಲೇ ಮಹತ್ವ

ಪವಿತ್ರ ಗುರುವಾರ ಕ್ರೈಸ್ತ ಧರ್ಮದಲ್ಲಿ ಅತ್ಯಂತ ಮಹತ್ವದ ದಿನವಾಗಿದೆ. ಈ ದಿನ ಏಸುಕ್ರಿಸ್ತರು ತಮ್ಮ ಶಿಷ್ಯರೊಂದಿಗೆ ಕೊನೆಯ ಭೋಜನವನ್ನು ಹಂಚಿಕೊಂಡರು. ಅದಕ್ಕಿಂತಲೂ ಪ್ರಮುಖವಾಗಿ, ತಮ್ಮ ಶಿಷ್ಯರ ಪಾದಗಳನ್ನು ತೊಳೆಯುವ ಮೂಲಕ ವಿನಯದ ಶ್ರೇಷ್ಠತೆಯನ್ನು ತೋರಿಸಿದರು. ಗುರುವಾಗಿದ್ದರೂ, ಸೇವಕನಾಗಿ ನಡೆದುಕೊಂಡ ಅವರು "ಯಾರು ದೊಡ್ಡವರಾಗಬೇಕೆಂದರೆ ಅವರು ಸೇವಕರಾಗಬೇಕು" ಎಂಬ ಶಾಶ್ವತ ಸಂದೇಶವನ್ನು ನೀಡಿದರು. ಇಂದಿನ ಸಮಾಜದಲ್ಲಿ ಸ್ಥಾನಮಾನಕ್ಕಾಗಿ ಹೋರಾಟ ನಡೆಯುತ್ತಿದ್ದರೂ, ಈ ದಿನ ನಮಗೆ ಕಲಿಸುವುದು ನಿಜವಾದ ಮಹತ್ವವು ಸೇವೆಯಲ್ಲಿ ಇದೆ.

ಶುಭ ಶುಕ್ರವಾರ : ತ್ಯಾಗ ಮತ್ತು ಕ್ಷಮೆಯ ಶಿಖರ

ಶುಭ ಶುಕ್ರವಾರವು ದುಃಖದ ದಿನವಾಗಿದ್ದರೂ, ಅದು ತ್ಯಾಗದ ಮಹತ್ವವನ್ನು ಸಾರುವ ದಿನವಾಗಿದೆ. ಈ ದಿನ ಏಸುಕ್ರಿಸ್ತರು ಶಿಲುಬೆಯ ಮೇಲೆ ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು. ಅವರು ಅನುಭವಿಸಿದ ನೋವು, ಅವಮಾನ ಮತ್ತು ಹಿಂಸೆಗಳ ನಡುವೆಯೂ, ತಮ್ಮನ್ನು ಹಿಂಸಿಸಿದವರಿಗಾಗಿ ಕ್ಷಮೆಯ ಪ್ರಾರ್ಥನೆ ಮಾಡಿದರು.

"ತಂದೆಯೇ, ಇವರೇನು ಮಾಡುತ್ತಿದ್ದಾರೆಂದು ಇವರಿಗೆ ಅರಿವಿಲ್ಲ; ಇವರನ್ನು ಕ್ಷಮಿಸು" ಎಂಬ ಮಾತುಗಳು ಮಾನವ ಇತಿಹಾಸದಲ್ಲೇ ಅತ್ಯುನ್ನತ ಕ್ಷಮೆಯ ಸಂಕೇತವಾಗಿದೆ.

ಈ ದಿನ ನಮಗೆ ಕಲಿಸುವುದು ಪ್ರತೀಕಾರವಲ್ಲ, ಕ್ಷಮೆಯೇ ಶಾಂತಿಯ ದಾರಿ.

ಈಸ್ಟರ್ ಸಂಡೆ : ಪುನರುತ್ಥಾನ ಮತ್ತು ಹೊಸ ಆಶೆ

ಶುಭ ಶುಕ್ರವಾರದ ನಂತರ ಬರುತ್ತದೆ ಈಸ್ಟರ್ ಸಂಡೆ ಜಯದ ಮತ್ತು ಆಶೆಯ ದಿನ. ಈ ದಿನ ಏಸುಕ್ರಿಸ್ತರು ಮರಣವನ್ನು ಜಯಿಸಿ ಪುನರುತ್ಥಾನಗೊಂಡರು. ಈ ಘಟನೆ ನಮಗೆ ಒಂದು ಮಹತ್ವದ ಸತ್ಯವನ್ನು ಸಾರುತ್ತದೆ ಅಂಧಕಾರದ ನಂತರ ಬೆಳಕು ಬರುತ್ತದೆ. ಕಷ್ಟಗಳ ನಂತರ ಜಯ ಬರುತ್ತದೆ.

ಪುನರುತ್ಥಾನವು ಕೇವಲ ಧಾರ್ಮಿಕ ಘಟನೆ ಅಲ್ಲ; ಅದು ನಮ್ಮ ಜೀವನದಲ್ಲಿಯೂ ಹೊಸ ಆರಂಭದ ಸಂಕೇತವಾಗಿದೆ. ನಮ್ಮ ತಪ್ಪುಗಳಿಂದ ಹೊರಬಂದು, ಹೊಸ ಜೀವನವನ್ನು ಆರಂಭಿಸಲು ಇದು ಒಂದು ಆಹ್ವಾನವಾಗಿದೆ.

ಸಮಾರೋಪ ಪವಿತ್ರ ಗುರುವಾರ, ಶುಭ ಶುಕ್ರವಾರ ಮತ್ತು ಈಸ್ಟರ್ ಸಂಡೆ ? ಈ ಮೂರು ದಿನಗಳು ಒಟ್ಟಾಗಿ ಮಾನವ ಜೀವನಕ್ಕೆ ಸಂಪೂರ್ಣ ಮಾರ್ಗದರ್ಶನವನ್ನು ನೀಡುತ್ತವೆ:


ಪವಿತ್ರ ಗುರುವಾರ ? ಸೇವೆ ಮತ್ತು ವಿನಯ

ಶುಭ ಶುಕ್ರವಾರ ? ತ್ಯಾಗ ಮತ್ತು ಕ್ಷಮೆ

ಈಸ್ಟರ್ ಸಂಡೆ ? ಆಶೆ ಮತ್ತು ಪುನರುತ್ಥಾನ

ಈ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ನಾವು ಶಾಂತಿ ಮತ್ತು ಸಂತೋಷದಿಂದ ಬದುಕಬಹುದು.

ಏಸುಕ್ರಿಸ್ತರು ತೋರಿಸಿದ ದಾರಿ ಕಷ್ಟವಾದರೂ, ಅದು ಸತ್ಯದ, ಪ್ರೀತಿಯ ಮತ್ತು ಶಾಂತಿಯ ದಾರಿಯಾಗಿದೆ. ಆ ದಾರಿಯಲ್ಲಿ ನಡೆಯುವಾಗ ಮಾತ್ರ ನಿಜವಾದ ಜೀವನದ ಅರ್ಥವನ್ನು ನಾವು ಅರಿತುಕೊಳ್ಳಬಹುದು.



ಲಾಜರ್ ಸಿರಿಲ್
ಪ್ರಾಚಾರ್ಯರು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಸಿಂಧನೂರ್

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಪಾಲಿಮರ್ ಸೈನ್ಸ್ ಮತ್ತು ಟೆಕ್ನಾಲಜಿ ಇಂಜಿನಿಯರಿಂಗ್

(ಪಾಲಿಮರ್ ಸೈನ್ಸ್ ಮತ್ತು ಟೆಕ್ನಾಲಜಿ ಇಂಜಿನಿಯರಿಂಗ್) ಪ್ಲಾಸ್ಟಿಕ್, ರಬ್ಬರ್, ಮತ್ತು ಕೃತಕ ವಸ್ತುಗಳ ವಿನ್ಯಾಸ, ಸಂಶೋಧನೆ ಮತ್ತು ತಯಾರಿಕೆಯನ್ನು ಕಲಿಸುವ 4 ವರ್ಷಗಳ (B.E./B.Tech) ಪದವಿ ಕೋರ್ಸ್ ಆಗಿದೆ. ಇದು ರಸಾಯನಶಾಸ್ತ್ರ, ಭೌತಶಾಸ್ತ್ರ ಮತ್ತು ಇಂಜಿನಿಯರಿಂಗ್ ಅನ್ನು ಸಂಯೋಜಿಸುತ್ತದೆ. ಪ್ಲಾಸ್ಟಿಕ್ ಸಂಸ್ಕರಣೆ, ಪಾಲಿಮರೈಸೇಶನ್ ಮತ್ತು ಹೊಸ ವಸ್ತುಗಳ ಅಭಿವೃದ್ಧಿ ಇದರ ಪ್ರಮುಖ ವಿಷಯಗಳಾಗಿವೆ. ಪೊಲಿಮರ್ ಇಂಜಿನಿಯರಿಂಗ್ ಕೋರ್ಸ್ ವಿವರಗಳು (Course Details in Kannada): ಕೋರ್ಸ್ ಹೆಸರು: B.E. / B.Tech in Polymer Science and Technology ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು) ಅರ್ಹತೆ (Eligibility): 12ನೇ ತರಗತಿ (PUC) ವಿಜ್ಞಾನ ವಿಭಾಗದಲ್ಲಿ (Physics, Chemistry, Maths) ಕನಿಷ್ಠ 50% ಅಂಕಗಳು (SC/ST ಅಭ್ಯರ್ಥಿಗಳಿಗೆ 45%). ಪ್ರವೇಶ ಪರೀಕ್ಷೆ (Entrance Exam): KCET (ಕರ್ನಾಟಕ) ಅಥವಾ JEE Main/COMEDK. ಡಿಪ್ಲೊಮಾ (Diploma): 3 ವರ್ಷಗಳ ಡಿಪ್ಲೊಮಾ ಇನ್ ಪಾಲಿಮರ್ ಟೆಕ್ನಾಲಜಿ (Diploma in Polymer Technology) ಕೋರ್ಸ್ ಕೂಡ ಲಭ್ಯವಿದೆ. ಕಲಿಯುವ ಪ್ರಮುಖ ವಿಷಯಗಳು (Key Subjects): Polymer Chemistry (ಪಾಲಿಮರ್ ರಸಾಯನಶಾಸ್ತ್ರ) Polymer Processing Techniques (ಪಾಲಿಮರ್ ಸಂಸ್ಕರಣಾ ತಂತ್ರಗಳು) Rubber Technology (ರಬ್ಬರ್ ತಂತ್ರಜ್ಞಾನ) Plastics Engineering (ಪ್ಲಾಸ್ಟಿಕ್ ಇಂಜಿನಿಯರಿಂಗ್) Material Science (ವಸ್ತು ವಿಜ್ಞಾನ) ಕೆಲಸದ ಅವಕಾಶಗಳು (Career Opportunities): ಪ್ಲಾಸ್ಟಿಕ್ ಮತ್ತು ರಬ್ಬರ್ ತಯಾರಿಕಾ ಕಂಪನಿಗಳು. ಪೆಟ್ರೋಕೆಮಿಕಲ್ ಕೈಗಾರಿಕೆಗಳು. ಪ್ಯಾಕೇಜಿಂಗ್ ಮತ್ತು ಆಟೋಮೊಬೈಲ್ ಉದ್ಯಮ. ಮೆಟೀರಿಯಲ್ ರಿಸರ್ಚ್ ಲ್ಯಾಬ್‌ಗಳು (R&D). ಕರ್ನಾಟಕದಲ್ಲಿ ಪ್ರಮುಖ ಸಂಸ್ಥೆಗಳು: CIPET (Central Institute of Petrochemicals Engineering & Technology), Mysore/Bangalore (CIPET ನಲ್ಲಿ UG ಮತ್ತು PG ಕೋರ್ಸ್‌ಗಳು ಲಭ್ಯವಿವೆ). Sri Jayachamarajendra College of Engineering (SJCE), Mysore (FUÀ JSS STU). Karnataka Government Polytechnic, Mangalore (ಡಿಪ್ಲೊಮಾಗಾಗಿ).

## ಅಪರಿಚಿತ ಪುರುಷನ ಶವ ಪತ್ತೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯ ರೈಲ್ವೇ ಸ್ಟೇಷನ್ ಏರಿಯಾದ ಗೂಡ್ ಶೇಡ್‌ನಲ್ಲಿ ಮಾರ್ಚ್ 28ರ ಸಂಜೆ 5.30ಗಂಟೆ ಸುಮಾರಿಗೆ ಅಂದಾಜು 45–50 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಕಂಡುಬಂದಿದ್ದು, ಸಂಬಂಧಿಕರ ಪತ್ತೆಗೆ ಪಶ್ಚಿಮ ಪೊಲೀಸ್ ಠಾಣೆಯ ಅಧಿಕಾರಿಗಳು ಕೋರಿದ್ದಾರೆ.**



ಅಪರಿಚಿತ ಮೃತನ ಹೆಸರು, ವಿಳಾಸ ತಿಳಿದು ಬಂದಿಲ್ಲ. ವ್ಯಕ್ತಿಯ ವಯಸ್ಸು 45–50 ವರ್ಷ, 5.5 ಎತ್ತರ ದುಂಡು ಮುಖ, ಗೋದಿ ಮೈ ಬಣ್ಣ ಮೈಬಣ್ಣ ಚಹರೆ ಹೊಂದಲಾಗಿದೆ. ಮೃತನ ಮಾಹಿತಿ ತಿಳಿದು ಬಂದಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532–232507 ಅಥವಾ ಪಶ್ಚಿಮ ಪೊಲೀಸ್ ಠಾಣೆಯ ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803847 ಗೆ ಸಂಪರ್ಕಿಸುವಂತೆ ಪಶ್ಚಿಮ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾರುಣ್ಯ ಆಶ್ರಮದಲ್ಲಿ ಸಿದ್ದಗಂಗಾ ಶ್ರೀಗಳ 119ನೇ ವರ್ಷದ ಜಯಂತೋತ್ಸವ ಕಾರ್ಯಕ್ರಮ

## ಸಿದ್ದಗಂಗಾ ಶ್ರೀಗಳು ಜಗತ್ತು ಕಂಡ ದೇವಮಾನವರಾಗಿದ್ದರು :ಡಾ.ಚನ್ನಬಸವ ಸ್ವಾಮಿ ಹಿರೇಮಠ

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಸ್ವಾಮಿ ಚಾರಿಟೇಬಲ್ ಟ್ರಸ್ಟ್ (ರಿ) ಕರಡಕಲ್ ಲಿಂಗಸೂಗೂರು. ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ (ರಿ) ಸಿಂಧನೂರು. ಹಾಗೂ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿ ದೇವಸ್ಥಾನ ಸಮಿತಿ,**

(ರಿ)ಹರೇಟನೂರು ಮತ್ತು ಸಂಜೆ ವಾಹಿನಿ ಹಾಗೂ ಭತ್ತದ ನಾಡು ಕನ್ನಡ ದಿನಪತ್ರಿಕೆ ಹಾಗೂ ಬೆಳಕು ಸಂಸ್ಥೆ ರಾಯಚೂರು ಇವರುಗಳ ಸಹಯೋಗದಲ್ಲಿ ತ್ರಿವಿಧ ದಾಸೋಹಿ ಮೂರ್ತಿಗಳಾದ ಲಿಂಗೈಕ್ಯ ಶ್ರೀ ಡಾ.ಶಿವಕುಮಾರ ಮಹಾಸ್ವಾಮಿಗಳು ಸಿದ್ದಗಂಗಾ ಮಠ ತುಮಕೂರು ಇವರ 119ನೇ ವರ್ಷದ ಜಯಂತೋತ್ಸವ ಕಾರ್ಯಕ್ರಮವು ಅರ್ಥಪೂರ್ಣವಾಗಿ ನೆರವೇರಿತು. ಇಂದಿನ ಈ ಕಾರ್ಯಕ್ರಮದ ಮಹಾಪ್ರಸಾದ ಸೇವೆಯನ್ನು ಚಿದಾನಂದ ಹೂಗಾರ ಗಂಗಾವತಿ ಇವರು ಆಶ್ರಮದಲ್ಲಿ ಇಡೀ ದಿನದ ಮಹಾಪ್ರಸಾದ ಸೇವೆಯನ್ನು ಸಲ್ಲಿಸಿ ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಸಿದ್ದಗಂಗಾ ಶ್ರೀಗಳ ಜಯಂತೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನೆರವೇರಿಸಿದರು.




ಈ ಕಾರ್ಯಕ್ರಮದಲ್ಲಿ ಚೇತನ ಫೌಂಡೇಶನ್ ಧಾರವಾಡ ಗಂಧದ ಗುಡಿ ಕನ್ನಡ ಸಂಘ ಬೆಂಗಳೂರು ಮತ್ತು ಕಾರುಣ್ಯ ಆಶ್ರಮ ಸಿಂಧನೂರು ಇವರುಗಳಿಂದ ಗಂಗಾವತಿಯ ಸಮಾಜಸೇವಕರಾದ ಚಿದಾನಂದ ಹೂಗಾರ ಇವರಿಗೆ " ಸಿದ್ದಗಂಗಾ ಶ್ರೀ ರಾಷ್ಟ್ರೀಯ ಸೇವಾ ಸ್ಪೂರ್ತಿ " ಎನ್ ಓ ಶ್ರೇಷ್ಠ ಪ್ರಶಸ್ತಿಯನ್ನು ವಿತರಿಸಿ ಗೌರವಿಸಿ ಆಶೀರ್ವದಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು ಮಾತನಾಡಿ ನಮ್ಮ ನಾಡಿನಲ್ಲಿ ಜನಿಸಿದ ಮಹಾನ್ ಚೇತನ ಸಿದ್ದಗಂಗಾ ಶ್ರೀಗಳು ವಿಶ್ವ ಕಂಡಂತಹ ಶ್ರೇಷ್ಠ ಶರಣರಾಗಿದ್ದರು. ಅವರು ಅಕ್ಷರ ಅನ್ನ ಜ್ಞಾನದಾಸೋಹದ ಮೂರ್ತಿಗಳಾಗಿದ್ದರು. ಇಂತಹ ನಡೆದಾಡುವ ದೇವರ ಜಯಂತೋತ್ಸವ ಕಾರ್ಯಕ್ರಮ ಪ್ರತಿ ವರ್ಷವೂ ಕೂಡ ಕಾರುಣ್ಯ ಕುಟುಂಬದಿಂದ ನೆರವೇರಿಸಿ ಒಬ್ಬ ಮಹಾನ್ ಸಾಧಕರನ್ನು ಗೌರವಿಸುವುದು ಕಾರುಣ್ಯ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಸಿದ್ದಗಂಗಾ ಶ್ರೀಗಳು ಜಗತ್ತು ಕಂಡ ದೇವಮಾನವರಾಗಿದ್ದರು. ಅದೆಷ್ಟು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ತಾವು ಜೋಳಿಗೆ ಹಾಕಿ ಶಿಕ್ಷಣ ಸಂಸ್ಕಾರ ಸಂಸ್ಕೃತಿಯನ್ನು ಸಮಾಜದಲ್ಲಿ ಪ್ರತಿಯೊಬ್ಬರಿಗೂ ಕೂಡ ಅಳವಡಿಸಿ ಸಾಮಾಜಿಕ ಕಳಕಳಿಯನ್ನು ಜಗತ್ತಿಗೆ ತೋರಿಸಿಕೊಟ್ಟಂತಹ ನಮ್ಮ ಅಪ್ಪಾಜಿ ಕಾರುಣ್ಯ ಕುಟುಂಬದ ನಡೆದಾಡುವ ದೇವರಾಗಿದ್ದಾರೆ. ಇಂತಹ ದೇವರ ಆಶೀರ್ವಾದ ಆಶ್ರಮದಲ್ಲಿರುವ ಆಶ್ರಯದಾತರುಗಳಿಗೆ ಸಿಗಲಿ ಇಲ್ಲಿನ ಆಶ್ರಯದಾತರುಗಳ ಹಿಂದಿನ ನೋವು ಕಷ್ಟಗಳನ್ನು ಮರೆಸುವಂತಾಗಿ ಇವರ ಬಾಳಿಗೆ ಸುಂದರ ಬದುಕು ಸಿಗಲಿ ಎನ್ನುವುದು ಕಾರುಣ್ಯ ಕುಟುಂಬದ ಮೂಲ ಆಶಯ ಇಂತಹ ಶರಣ–ರ ಸಂತರ ಪರಮಪೂಜ್ಯರ ಆಶೀರ್ವಾದವೇ ಕಾರುಣ್ಯ ಕುಟುಂಬದ ಸೇವೆಗೆ ಸ್ಪೂರ್ತಿಯಾಗಿದೆ.


ನೊಂದವರ ನಾಡಿಮಿಡಿತವಾಗಿರುವ ಸಿದ್ದಗಂಗಾ ಶ್ರೀಗಳು ಕಾರುಣ್ಯ ಕುಟುಂಬದ ಕಾರುಣ್ಯ ಮೂರ್ತಿಗಳಾಗಿದ್ದಾರೆ ಎಂದು ಮಾತನಾಡಿ ಸಾಧಕರಾದ ಚಿದಾನಂದ ಹೂಗಾರ ಅವರಿಗೆ ಅಭಿನಂದನೆಗಳನ್ನು ಅರ್ಪಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರವೀಣ್ ಕುಮಾರ್. ಶೈಲಜಾ ಹಿರೇಮಠ.ಶರಣಮ್ಮ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ.ಮೀನಾಕ್ಷಮ್ಮ. ಲಕ್ಷ್ಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

# ಎ.5 ರಂದು ಡಾ.ಬಾಬು ಜಗಜೀವನರಾಮ್ ರವರ ಜಯಂತೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕ ಆಡಳಿತ,ತಾಲೂಕ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಮುದ್ದೇಬಿಹಾಳ ಹಾಗೂ ಪುರಸಭೆ ತಾಳಿಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ರವರ 119 ನೇ ಜಯಂತೋತ್ಸವವನ್ನು ಏಪ್ರಿಲ್ 5ರಂದು ಪಟ್ಟಣದಲ್ಲಿ ಆಚರಿಸಲಾಗುವುದು.**

ಅಂದು ಬೆಳಿಗ್ಗೆ 9–30 ಘಂಟೆಗೆ ತಾಲೂಕ ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ಪೂಜಾ ಕಾರ್ಯಕ್ರಮ ಜರುಗುವುದು ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಾಬು ಜಗಜೀವನ್ ರಾಮ್ ರವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯುವುದು. ಪಟ್ಟಣದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಆವರಣದಲ್ಲಿ



ನಡೆಯಲಿರುವ ವೇದಿಕೆ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ.ಪಾಟೀಲ ಅವರ ಘನ ಉಪಸ್ಥಿತಿ ಇರುವುದು. ಕೆ ಎಸ್ ಡಿ ಎಲ್ ಅಧ್ಯಕ್ಷರು ಹಾಗೂ ಮುದ್ದೇಬಿಹಾಳ ಶಾಸಕರಾದ ಅಪ್ಪಾಜಿ ನಾಡಗೌಡರು ಅಧ್ಯಕ್ಷತೆ ವಹಿಸುವರು.ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲರ ಸಹ ಅಧ್ಯಕ್ಷತೆ ಇರುವುದು.

ಮುಖ್ಯ ಅತಿಥಿಗಳಾಗಿ ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಎನ್, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ–2 ಪ್ರಕಾಶ ಬಿ.ಹುಕ್ಕೇರಿ, ಸಂಸದ ರಮೇಶ ಚಂ.ಜಿಗಜಿಣಗಿ , ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ಹಣಮಂತ ಆರ್ ನಿರಾಣಿ,ಸುನೀಲಗೌಡ ಬಿ.ಪಾಟೀಲ,ಪಿ. ಎಚ್.ಪೂಜಾರ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯ್ಕ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಅ.ಬಬಲೇಶ್ವರ, ಕರ್ನಾಟಕ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿಎಸ್ ಕವಲಗಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗಮೇಶ ದೇಸಾಯಿ ಆಗಮಿಸುವರು.

ಸಹ ಶಿಕ್ಷಕಿ ಸಾಹಿತಿ ಮಡಿವಾಳಮ್ಮ ಎಸ್.ಜಿ. ನಾಗಗೌಡ ವಿಶೇಷ ಉಪನ್ಯಾಸ ನೀಡುವರು. ತಹಸಿಲ್ದಾರ್ ಡಾ.ವಿನಯಾ ಎ.ಹೂಗಾರ,ತಾಪಂ ಇಓ ಅನಸೂಯಾ ಚಲವಾದಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಬಸಂತಿ ಜಿ. ಮಠ,ಸಿಪಿಐ ಮೊಹಮ್ಮದ್ ಫಸಿವುದ್ದೀನ ಹಾಗೂ ಪುರಸಭೆ ಮುಖ್ಯಾಧಿಕಾರಿ ವಸಂತ್ ಪವಾರ ಉಪಸ್ಥಿತರಿರುವರು. ಸದರಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಗೆ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ತಾಲೂಕಾಡಳಿತದ ಪ್ರಕಟಣೆ ತಿಳಿಸಿದೆ.

# ಸಿದ್ದಗಂಗಾ ಮಠದ ಲಿಂ. ಶ್ರೀ.ಶಿವಕುಮಾರ ಸ್ವಾಮಿಗಳ ಜನ್ಮದಿನಾಚರಣೆ ಅಂಗವಾಗಿ ಅನ್ನದಾಸೋಹ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ನೆರಳು ಹಿರಿಯರ ಮನೆಯಲ್ಲಿ ಸಿದ್ದಗಂಗಾ ಮಠದ ಲಿಂ. ಶ್ರೀ.ಶಿವಕುಮಾರ ಸ್ವಾಮಿಗಳ 119ನೇ ಹುಟ್ಟು ಹಬ್ಬವನ್ನು ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿಗಳು ಆಚರಣೆ ಮಾಡಿದರು.**

ಸಿದ್ದಗಂಗಾ ಮಠದ ಲಿಂ. ಶ್ರೀ.ಶಿವಕುಮಾರ ಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಠದ ಹಳೆಯ ವಿದ್ಯಾರ್ಥಿ ವೆಂಕಯ್ಯ ಶೆಟ್ಟಿ ಮಾತನಾಡಿ ನಾಡಿನ ಸಿದ್ದಗಂಗಾ ಮಠವು ತ್ರಿವಿದ ದಾಸೋಹ ಗಳಾದ ಅನ್ನ,ಅಕ್ಷರ,ಅಭಯವನ್ನು ನೀಡುವ ಪುಣ್ಯ ಕ್ಷೇತ್ರವಾಗಿದು ಇಂದು ಶ್ರೀಮಠದಲ್ಲಿ ಸಾವಿರಾರು ಮಕ್ಕಳಿಗೆ ಆಶ್ರಯವನ್ನು ನೀಡಿ ಉತ್ತಮ ಶಿಕ್ಷಣವನ್ನು,ಸಂಸ್ಕರವನ್ನು ನೀಡುವ ಮೂಲಕ ನಾಡಿನ ಉತ್ತಮ ಪ್ರೇಜೆಗಳನ್ನಾಗಿ ರೂಪಿಸುತ್ತಿದೆ




ಶ್ರೀಮಠದಲ್ಲಿ ಲಿಂ. ಶ್ರೀ.ಶಿವಕುಮಾರ ಸ್ವಾಮಿಗಳ ಆಶ್ರಯದಲ್ಲಿ ಬೆಳೆದ ಲಕ್ಷಾಂತರ ವಿದ್ಯಾರ್ಥಿಗಳು ಇಂದು ಉತ್ತಮ ಜೀವನವನ್ನು ರೂಪಿಸಿಕೊಂಡಿದ್ದಾರೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯೋಣ ನಮ್ಮನ್ನು ನಾವು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳೋಣ ಎಂದು ತಿಳಿಸಿದರು.

ಬಾಲಪ್ಪ ನಾಯಕ ಮಾತನಾಡಿ ಲಿಂ.ಶ್ರೀ ಶಿವಕುಮಾರ ಸ್ವಾಮೀಜಿಗಳು ನಮ್ಮೆಲ್ಲರ ನೆಡೆದಾಡುವ ದೇವರಾಗಿದ್ದರು. ಹಾಗೂ ನಾಡಿನ ಮಕ್ಕಳಿಗೆ ಆಶ್ರಯದಾತರಾಗಿದ್ದರು ಅವರ ಹುಟ್ಟು ಹಬ್ಬವನ್ನು ಸಮಾಜಿಕ ಕಾರ್ಯಕ್ರಮಗಳ ಮೂಲಕ ಅರ್ಥಿಪೂರ್ಣವಾಗಿ ಆಚರಿಸೋಣ ಎಂದು ತಿಳಿಸಿದರು. ಸಿದ್ದಗಂಗಾ ಮಠದ ಲಿಂ. ಶ್ರೀ.ಶಿವಕುಮಾರ ಸ್ವಾಮಿಗಳ ಜನ್ಮದಿನದ ಅಂಗವಾಗಿ ಹಿರಿಯರ ಮನೆಯ ಸದಸ್ಯರಿಗೆ ಅನ್ನದಾಸೋಹವನ್ನು ಮಾಡಲಾಯಿತು.

ನೆರಳು ಹಿರಿಯರ ಮನೆಯ ವ್ಯವಸ್ಥಾಪಕರಾದ ಚನ್ನಬಸವ ಸ್ವಾಮಿ ಯದ್ದಲದೊಡ್ಡಿ,ಅಮರೇಶ ಯಡಿವಾಳ, ಹನುಮಂತ ಡೋಣಮರಡಿ, ಬಸವರಾಜ ವಕೀಲರು, .ಚನ್ನಬಸವ ಕೊಡ್ಲಿ,ಮಂಜುನಾಥ.ಸಿ.ಬಿ. ರಾಮು ಕಾತರಕಿ, ವೆಂಕಟೇಶ ಬಲ್ಲಟಗಿ,ಹನುಮೇಗೌಡ ಸೇರಿದಂತೆ ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿಗಳು, ನೆರಳು ಹಿರಿಯರ ಮನೆಯ ನಿವಾಸಿಗಳು ಇದ್ದರು.

# ಕಾರುಣ್ಯಾಶ್ರಮಕ್ಕೆ ಸಿದ್ದಗಂಗಾ ರಾಷ್ಟ್ರೀಯ ಸೇವಾ ಸ್ಪೂರ್ತಿ ಪ್ರಶಸ್ತಿ ಪ್ರಧಾನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತುಮಕೂರಿನ ಶ್ರೀ ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಚೇತನ ಫೌಂಡೇಶನ್ ಧಾರವಾಡ ಹಾಗೂ ಗಂಧದ ಗುಡಿಸಂಘ ಬೆಂಗಳೂರು ಇವರುಗಳ ವತಿಯಿಂದ " ತುಮಕೂರು ನುಡಿ ಸಡಗರ " ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮದಲ್ಲಿ ಸಿಂಧನೂರಿನ ಕಾರುಣ್ಯಾಶ್ರಮದ ಸದಸ್ಯರಾದ ಡಾ.ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಹಾಗೂ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು ಮತ್ತು ಸಲಹಾ ಸಮಿತಿಯ ಸದಸ್ಯರಾದ ವೀರಭದ್ರಗೌಡ ಗಿಣಿವಾರ ಇವರುಗಳಿಗೆ "ಸಿದ್ದಗಂಗಾ ರಾಷ್ಟ್ರೀಯ ಸೇವಾ ಸ್ಪೂರ್ತಿ" ಎನ್ನ ಶ್ರೇಷ್ಠ ರಾಷ್ಟ್ರೀಯ ಪ್ರಶಸ್ತಿಯನ್ನು ವಿತರಿಸಿ ಸನ್ಮಾನಿಸಿ ಗೌರವಿಸಿದರು.**

ಈ ಕಾರ್ಯಕ್ರಮದಲ್ಲಿ ಮೈಸೂ–ರಿನ ಖ್ಯಾತ ಕವಿಗಳಾದ ಡಾ. ಜಯಪ್ಪ ಮಾತನಾಡಿ ಸಿದ್ದಗಂಗಾ ಶ್ರೀಗಳ 119ನೇ ವರ್ಷದ ಜಯಂತೋತ್ಸವ ಕಾರ್ಯಕ್ರಮ ಇನ್ನೆರಡು ದಿನದಲ್ಲಿ ನೆರವೇರಲಿದ್ದು. ಇಂತಹ ಒಂದು ವಿಶೇಷ ಕ್ಷೇತ್ರದಲ್ಲಿ ಹಲವಾರು ಸಾಧಕರು ಸಿದ್ದಗಂಗಾ ಶ್ರೀಗಳ ಈ ಪ್ರಶಸ್ತಿ ಸ್ವೀಕರಿಸುತ್ತಿರುವುದು. ನಮ್ಮೆಲ್ಲರಿಗೆ ಶ್ರೀಗಳ ಆಶೀರ್ವಾದದಂತೆ ಈ ಪ್ರಶಸ್ತಿಯನ್ನು ತಾವು ಸ್ವೀಕ–ರಿಸುತ್ತಿದ್ದೀರಿ. ಮತ್ತು ವಿಶೇಷವಾಗಿ ರಾಯಚೂರು ಜಿಲ್ಲೆಯ ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬಕ್ಕೆ ಈ ಪ್ರಶಸ್ತಿ ದೊರೆತಿರುವುದು. ಅನೇಕ




ಸಾಧಕರಿಗೆ ಸ್ಪೂರ್ತಿಯಾಗಿದೆ. ಕಲ್ಪತರು ನಾಡಿನಲ್ಲಿ ಈ ವಿಶೇಷ ಪ್ರಶಸ್ತಿಯನ್ನು ಸ್ವೀಕಾರ ಮಾಡುವಂತ ಎಲ್ಲಾ ದಾನಿಗಳಿಗೆ ಶುಭವಾಗಲಿ ತಾವು ಸಮಾಜದ ಬಹುದೊಡ್ಡ ಆಸ್ತಿಯಾಗಿ ಇನ್ನೂ ಹೆಚ್ಚಿನ ಸೇವೆಯನ್ನು ಸಮಾಜಕ್ಕೆ ಒದಗಿಸುವಂತಹ ಶುಭಾಶೀರ್ವಾದ ತಮಗೆ ದೊರೆಯಲಿ ಎನ್ನುವ ಹಾರೈಕೆ ನನ್ನದು ಎಂದು ಅರ್ಥಪೂರ್ಣವಾಗಿ ಮಾತನಾಡಿ ಎಲ್ಲಾ ಸಾಧಕರುಗಳಿಗೆ ಶುಭ ಕೋರಿದರು.

ನಂತರ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿ ಕಾರುಣ್ಯ ಆಶ್ರಮಕ್ಕೆ ದೊರೆತಿ–ರುವ ಪ್ರಶಸ್ತಿಗಳು ಸನ್ಮಾನಗಳು ಗೌರವಗಳು ಆಶ್ರಮಕ್ಕೆ ಸಹಾಯ ಸಹಕಾರ ಮಾಡುವ ಮಹಾದಾನಿಗಳಿಗೆ ಅರ್ಪಣೆ ಸಿದ್ದಗಂಗಾ ಶ್ರೀಗಳು ತಮ್ಮ ಜೋಳಿಗೆಯ ಮೂಲಕ ವಿಶ್ವ ಕಂಡಂತಹ ತ್ರಿವಿಧ ದಾಸೋಹಿ ಮೂರ್ತಿಗಳಾಗಿ ಮಾನವ ಧರ್ಮದ ನಡೆದಾಡುವ ದೇವರುಗಳಾಗಿದ್ದರು ಇಂತಹವರ ಪುಣ್ಯಭೂಮಿಯಲ್ಲಿ ಇಂತಹ ಗೌರವ ಸನ್ಮಾನಗಳು ನಮ್ಮನ್ನು ಇನ್ನೂ ಹೆಚ್ಚಿನ ಸೇವೆ ಮಾಡಲು ಆಶೀರ್ವದಿಸಿದಂತಾಗಿದೆ.

ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮವು ಸಿದ್ದಗಂಗಾ ಕ್ಷೇತ್ರದ ಲಿಂಗೈಕ್ಯ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳ ಹಾಗೂ ಒಳಬಳ್ಳಾರಿಯ ಲಿಂಗೈಕ್ಯ ಶ್ರೀ ಮ.ನಿ. ಪ್ರ.ಚನ್ನಬಸವ ಮಹಾಶಿವಯೋಗಿಗಳ ಮತ್ತು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಲಿಂಗೈಕ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಆಶೀರ್ವಾದದಂತೆ ನಿರಂತರ ಅವರ ಧ್ಯಾನದೊಂದಿಗೆ ಕಾರುಣ್ಯ ಕುಟುಂಬದ ಸೇವೆ ಜರುಗುತ್ತಿದೆ. ನಮ್ಮ ಸಿದ್ದಗಂಗಾ ಶ್ರೀಗಳು ತ್ರಿವಿಧ ದಾಸೋಹಿ ಮೂರ್ತಿಗಳಾಗಿ ಅಕ್ಷರ ಅನ್ನ ಜ್ಞಾನ ದಾಸೋಹ ಮಾನವ ಧರ್ಮಕ್ಕೆ ಅರ್ಪಿಸಿದರೆ ಕಾರುಣ್ಯ ಕುಟುಂಬದ ಜೋಳಿಗೆ ಅನಾಥ–'ರಿಗೆ ತಮಗರಿವಿಲ್ಲದ ಮಾನವ ಜೀವಿಗಳಿಗೆ ಮತ್ತು ನೊಂದ ಜೀವಿಗಳಿಗೆ ನಾಡಿಮಿಡಿತವಾಗಿ ಕಾರ್ಯನಿರ್ವಹಿಸುತ್ತಿದೆ. ಇಂತಹ ಸೇವೆಗೆ ಸಹಾಯ ಸಹಕಾರ ಮಾಡುವ ದಾನಿಗಳೇ ನಮ್ಮ ನಡೆದಾಡುವ ದೇವರುಗಳಾಗಿದ್ದಾರೆ. ಸದಾವಕಾಲ ತಮ್ಮೆಲ್ಲರ ಹರಕೆ ಹಾರೈಕೆ ಆಶೀರ್ವಾದ ಸಿಂಧನೂರಿನ ನಿಮ್ಮೆಲ್ಲರ ಕರುಣೆಯ ಕಾರುಣ್ಯ ಕುಟುಂಬದ ಮೇಲಿರಲಿ ಎಂದು ಭಾವನಾತ್ಮಕವಾಗಿ ಮಾತನಾಡಿ ಇನ್ನುಳಿದ ಎಲ್ಲಾ ಸಾಧಕರುಗಳಿಗೆ ಅಭಿನಂದನೆಗಳನ್ನು ಅರ್ಪಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ. ರಂಗಸ್ವಾಮಿ ಶಿಕ್ಷಕರು ಮತ್ತು ಸಮಾಜ ಸೇವಕರು ತುಮಕೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು ಉದ್ಘಾಟಕರಾಗಿ ಡಾ.ಜಯಪ್ಪ ಹೊನ್ನಾಳಿ ಮೈಸೂರು ನಾಡಿನ ಸುಪ್ರಸಿದ್ಧ ಕವಿಗಳು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಸಂಗಮನಾಥ ಪಿ ಸಜ್ಜನ ಇವರ ತುಕ್ಕುಬುಕ್ಕು ರೈಲು ಮಕ್ಕಳ ಕವನ ಸಂಕಲನ ಕೃತಿಯ ಅನಾವರಣವನ್ನು ಡಾ. ಪ್ರಕಾಶ. ಗ.ಖಾಡೆ ಸಾಹಿತಿ ಸಂಸ್ಕೃತಿ ಚಿಂತಕರು ಬಾಗಲಕೋಟೆ ಇವರು ಕೃತಿ ಅನಾವರಣ ಗೊಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ.ಬಿ.ಅಜಮುತುಲ್ಲಾ ಪ್ರಾಂಶುಪಾಲರು ಶ್ರೀ ಸಿದ್ದಾರ್ಥ ಎಜುಕೇಶನ್ ಸೊಸೈಟಿ ತುಮಕೂರು.

ರಮಾ. ಆರ್.ರಾಜ್ಯಾಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ತು ಬೆಂಗಳೂರು. ಎಲ್. ಐ. ಲಕ್ಕಮ್ಮನವರು ರಾಜ್ಯ ಗೌರವಾಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ತು ಬೆಂಗಳೂರು. ಡಾ.ಚಂದ್ರಶೇಖರ ಮಾಡಲಗೇರಿ ಸುದ್ದಿ ಸಂಪಾದಕರು ವಿಸ್ಮಯವಾಣಿ ದಿನಪತ್ರಿಕೆ ಸಂಪಾದಕರು. ಹಾಗೂ ಸಂಸ್ಥಾಪಕರು ಚೇತನ ಫೌಂಡೇಶನ್ ಧಾರವಾಡ. ಸಂಗಮನಾಥ ಸಜ್ಜನ ಕೃತಿಕಾರರು. ಶೇಖರಪ್ಪ ವಿ. ಡಿ.ವೈ. ಎಸ್.ಪಿ. ಅಬಕಾರಿ ಇಲಾಖೆ ರಾಣೇಬೆನ್ನೂರು. ಎಂ ಆರ್ ಮಲ್ಲಿಕಾರ್ಜುನಯ್ಯ. ರಾಜ್ಯ ಕೋಶ ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ತು. ವೀರೇಶ ಕೆ. ಎಸ್.ಸಂಚಾಲಕರು ಚೇತನ ಫೌಂಡೇಶನ್ ಧಾರವಾಡ.

ಕು.ಭಾಗ್ಯಶ್ರೀ ರಜಪೂತ ಕಾರ್ಯಾಧ್ಯಕ್ಷರು ಚೇತನ ಫೌಂಡೇಶನ್ ಧಾರವಾಡ. ಚಂದ್ರಕಾಂತ ಬಿರಾದಾರ ಹಿರಿಯ ಲೇಖಕರು ಪತ್ರಕರ್ತರು ಭಾಲ್ಕಿ ಬೀದರ್. ಡಾ.ಬಿ ತೇಜಸ್ವಿ ಕಿರಣ್ ಲೇಖಕರು ಸಮಾಜ ಸೇವಕರು ತುಮಕೂರು ಅಣ್ಣಪ್ಪ ಗೌಡ ಮೇಟಿ ಗೌಡ್ರು ಸಂಪಾದಕರು ಸಂಜೆ ವಾಹಿನಿ ಮತ್ತು ಭತ್ತದ ನಾಡು ಕನ್ನಡ ದಿನಪತ್ರಿಕೆ ಮತ್ತು ಸಂಸ್ಥಾಪಕರು ಬೆಳಕು ಸಂಸ್ಥೆ ರಾಯಚೂರು. ವಿರುಪಮ್ಮ ಹಿರೇಮಠ ಶಿಕ್ಷಕರು ಜಗಳೂರು ರೋಣ. ಹಾಗೂ ಕಾರುಣ್ಯ ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್. ರೇಣುಕಾ ಸ್ವಾಮಿ ಬಿ.ಎಸ್.ಎನ್.ಎಲ್.ಅಧಿಕಾರಿಗಳು ಸಿಂಧನೂರು.ಮತ್ತು ವೀರಭದ್ರಗೌಡ ಗಿಣಿವಾರ ಅಂಬು ಪಾಟೀಲ್ ರೇಖಲಮರಡಿ. ಶರಣಪ್ಪ ನಾಯಕ ಕಸಬಾ ಲಿಂಗಸೂರು. ಹಾಗೂ ಅನೇಕ ಸಾಹಿತಿಗಳು ಕವಿಗಳು ಸಾಹಿತಿಗಳು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.